ವಿಶ್ವವಾಣಿ
ವಿಶ್ವಾಸವೇ ವಿಶ್ವ

ಶಿವರಾಜ್‌ಕುಮಾರ್‌ಗೆ ಅಮೆರಿಕದಲ್ಲಿ ಚಿಕಿತ್ಸೆ

ಅನಾರೋಗ್ಯ ಹಿನ್ನೆಲೆಯಲ್ಲಿ ಚಿಕಿತ್ಸೆಗೆಂದು ಒಂದು ತಿಂಗಳು ಅಮೆರಿಕಕ್ಕೆ ತೆರಳುವುದಾಗಿ ನಟ ಶಿವಣ್ಣ ತಿಳಿಸಿದ್ದಾರೆ.

ಪುಟ ತೆರೆದಂತೆ...

ಜೀವತಜ್ಞರೊಂದಿಗೆ ಸಾಗರದಲ್ಲೊಂದು ಸುತ್ತು
ಶಿಶಿರ್ ಹೆಗಡೆ
ಶಿಶಿರ್ ಹೆಗಡೆ

ಸಂ.ಪುಟ | 6

ಕಲ್ಲೇಟಿಗೆ ಉದುರುವ ಮಾವಿನ ಕಾಯಿ
ಶಶಾಂಕಣ
ಶಶಿಧರ ಹಾಲಾಡಿ

ಸಂ.ಗಮ | 7

ಮಾತಂದ್ರೆ ಮಾತು

ಕರ್ನಾಟಕ ಸರಕಾರ ವಾದ ಕಿಯಾ, ಧೋಕಾ ದಿಯಾ ಎಂದು ಮಹಾರಾಷ್ಟ್ರ ಬಿಜೆಪಿ ಸುಳ್ಳು ಜಾಹೀರಾತು ನೀಡಿ, ಜನರ ದಾರಿ ತಪ್ಪಿಸುತ್ತಿದೆ. ರಾಜ್ಯದಲ್ಲಿ ಶಕ್ತಿ ಯೋಜನೆ ಸೇರಿದಂತೆ ಐದಕ್ಕೆ ಐದೂ ಗ್ಯಾರಂಟಿಗಳು ಯಶಸ್ವಿಯಾಗಿ ನಡೆದುಕೊಂಡು ಹೋಗುತ್ತಿವೆ. ಗೃಹಲಕ್ಷ್ಮಿಯ ಮುಂದಿನ ಕಂತಿನ ಹಣ ಒಂದೆರಡು ದಿನಗಳಲ್ಲೇ ಬಿಡುಗಡೆ ಕೂಡ ಆಗುತ್ತದೆ. ಆದರೆ ಬಿಜೆಪಿಯವರು ಸುಳ್ಳುಗಳನ್ನು ಹರಡುವುದಕ್ಕೇ ಕೋಟಿ ಕೋಟಿ ಖರ್ಚು ಮಾಡುತ್ತಿದ್ದಾರೆ.

ಸಿದ್ದರಾಮಯ್ಯ
ಮುಖ್ಯಮಂತ್ರಿ

ಪಾಲ್ ಸಮಿತಿ ಭೇಟಿಗೆ ಕಾಂಗ್ರೆಸ್ ಕೆಂಡ | ಹುಬ್ಬಳ್ಳಿಯಲ್ಲಿ ಜಮೀರ್ ಸಭೆ

ವಕ್ಫ್ ಬೇಲಿ: ಜೆಪಿಸಿಗೆ ದೂರುಗಳ ಸುರಿಮಳೆ

ಬೆಂಗಳೂರು: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ವಕ್ಫ್ ನೋಟಿಸ್ ಪ್ರಕರಣದಲ್ಲಿ ಜಂಟಿ ಸದನ ಸಮಿತಿ ಎಂಟ್ರಿ ಕೊಟ್ಟಿದ್ದು, ವಿಜಯಪುರ, ಹುಬ್ಬಳ್ಳಿ ಹಾಗೂ ಬೆಳಗಾವಿಯಲ್ಲಿ ಸರಣಿ ದೂರುಗಳು ಬಂದಿವೆ. ಆದರೆ ಜಂಟಿ ಸದನ ಸಮಿತಿ ಅಧ್ಯಕ್ಷರೊಬ್ಬರೇ ಆಗಮಿಸುವ ಮೂಲಕ ಇದರಲ್ಲಿಯೂ ರಾಜಕೀಯ ಮಾಡುತ್ತಿದ್ದಾರೆ ಎಂದು ಕಾಂಗ್ರೆಸಿಗರು ದೂರಿದ್ದಾರೆ.

ಗುರುವಾರ ರಾಜ್ಯಕ್ಕೆ ಆಗಮಿಸಿದ ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ಅವರು ವಕ್ಫ್ ನೋಟಿಸ್ ಪಡೆದಿರುವ ರೈತರೊಂದಿಗೆ ಚರ್ಚೆ ನಡೆಸಿದರು. ಪಾಲ್ ಅವರು ಆಗಮಿಸಿರುವುದನ್ನು ಬಿಜೆಪಿಗರು ಸಮರ್ಥಿಸಿಕೊಂಡರೆ, ಕಾಂಗ್ರೆಸಿಗರು ಇದೊಂದು ರಾಜಕೀಯ ನಾಟಕವೆಂದು ವಾಗ್ದಾಳಿ ನಡೆಸಿದ್ದಾರೆ. ಪರ- ವಿರೋಧ ಚರ್ಚೆಯ ನಡುವೆ, ಸಮಸ್ಯೆ ಆಲಿಸಿರುವ ಪಾಲ್, ಈ ಬಗ್ಗೆ ಅಗತ್ಯ ಕಾನೂನು ಕ್ರಮದ ಭರವಸೆ ನೀಡಿದ್ದಾರೆ.

ವಕ್ಫ್ ವಿವಾದಕ್ಕೆ ಸಂಬಂಧ ಸಂಸದೀಯ ಜಂಟಿ ಸಮಿತಿಯ ಅಧ್ಯಕ್ಷ ಜಗದಂಬಿಕಾ ಪಾಲ್ ಅವರು, ಹುಬ್ಬಳ್ಳಿ ಸೇರಿದಂತೆ ಇತರೆಡೆ ಭೇಟಿ ನೀಡಿ ಪರಿಶೀಲಿಸಿ ಮನವಿ ಪಡೆದಿದ್ದಾರೆ. ರೈತರು, ಮಠ, ಮಂದಿರಗಳ ಜಮೀನುಗಳ ಪಹಣಿ ಅಧಿಕಾರಿಗಳ ಸಹಕಾರವಿಲ್ಲದೆ ವಕ್ಫ್ ಆಸ್ತಿ ಬದಲಿಸಲು ಹೇಗೆ ಸಾಧ್ಯ? ನೂರಾರು ವರ್ಷದಿಂದ ವ್ಯವಸಾಯ ಮಾಡುತ್ತಿರುವ ರೈತರ ಜಮೀನು ವಕ್ಫ್ ಆಸ್ತಿ ಆಗಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, ಸಂಸದೀಯ ಜಂಟಿ ಸಮಿತಿ(ಜೆಪಿಸಿ) ಒಂದು ನಾಟಕ ಕಂಪನಿ. ಜೆಪಿಸಿಗೆ ಒಂದು ನಿಯಮ ಇದೆ. ಸಮಿತಿ ಅಧ್ಯಕ್ಷರು ಭೇಟಿ ನೀಡುವ ಮೊದಲು ರಾಜ್ಯ ಸರಕಾರ ಹಾಗೂ ಅಧಿಕಾರಿಗಳಿಗೆ ತಿಳಿಸಬೇಕು. ಅದರಲ್ಲಿರುವ ಸದಸ್ಯರೆಲ್ಲರೂ ಬರಬೇಕು. ಒಬ್ಬರು ಅಧ್ಯಕ್ಷರು ಮಾತ್ರ ಭೇಟಿ ನೀಡಿ ಒಬ್ಬ ಸಂಸದರನ್ನು ಕರೆದುಕೊಂಡು ಬಂದಿದ್ದಾರೆ. ಅವರ ಪಕ್ಷದ ಕೆಲಸಕ್ಕೆ ಬಂದಿದ್ದಾರೆ ಎಂದು ಕುಟುಕಿದೆ. ವಕ್ಫ್ ಮಂಡಳಿ ನೋಟಿಸ್ ನೀಡಿರುವುದು ನಮ್ಮ ಅವಧಿಯಲ್ಲಿ ಅಲ್ಲ. ಬಿಜೆಪಿ ಅವಧಿಯಲ್ಲೇ ಅತ್ಯಧಿಕ ಎಂದು ಕಾಂಗ್ರೆಸ್ ಹೇಳಿದೆ. ಆದರೆ, ಈಗ ವಕ್ಫ್ ಸಚಿವರ ಸೂಚನೆ ಮೇರೆಗೆ ಮಠಮಾನ್ಯಗಳ ಆಸ್ತಿಯ ಮೇಲೂ ಕಾಂಗ್ರೆಸ್ ಕಣ್ಣು ಬಿದ್ದಿದೆ ಎಂದು ಬಿಜೆಪಿ ಆರೋಪಿಸಿದೆ.

ಹುಬ್ಬಳ್ಳಿಯಲ್ಲಿ ಸಂಸದ ಜಗದಾಂಬಿಕಾ ಪಾಲ್ ಅವರಿಗೆ ಬಿಜೆಪಿ ನಾಯಕರು ಅಹವಾಲು ಸಲ್ಲಿಸಿದರು. ಸಂಸದರಾದ ಗೋವಿಂದ ಕಾರಜೋಳ, ತೇಜಸ್ವಿ ಸೂರ್ಯ, ಶಾಸಕರಾದ ಅರವಿಂದ ಲಿಂಬಾವಳಿ, ಮಹೇಶ್ ಟೆಂಗಿನಕಾಯಿ ಇದ್ದರು.

ಆದರೆ ವಿಷಯವನ್ನು ಕೈಗೆತ್ತಿಕೊಂಡಿದ್ದ ರಾಜ್ಯ ಬಿಜೆಪಿಗೆ ಇದರಲ್ಲಿ ಆಸಕ್ತಿ ಉಳಿದಿಲ್ಲ ಎನ್ನುವ ಅನುಮಾನ ಶುರುವಾಗಿದೆ. ವಿವಾದ ಸಂಬಂಧ ಯತ್ನಾಳ್ ಅವರ ಅಮರಣಾಂತರ ಸತ್ಯಾಗ್ರಹಕ್ಕೆ ರಾಜ್ಯ ನಾಯಕರ ಸಹಕಾರವಿಲ್ಲದೆ ಕೇಂದ್ರ ನಾಯಕರು ಬೆಂಬಲ ನೀಡುವಂತಾಗಿದೆ.

→ 4



ಜಮೀರ್ ವಿರುದ್ಧ ಕಾಂಗ್ರೆಸ್ ಶಾಸಕರೇ ಅಸಮಧಾನಗೊಂಡಿದ್ದಾರೆ. ಜಮೀರ್ ಪ್ರವಾಸ ತಡೆಯಿರಿ ಎನುತ್ತಿದ್ದಾರೆ. ಜಮೀರ್ ನನಗೆ ನಿಮ್ಮ ಅಪ್ಪನ ಆಸ್ತಿಯಾ ಎಂದಿದ್ದ. ನಾ ಇದು ನಿಮ್ಮ ಅಪ್ಪಂದಾ ಎಂದಿದ್ದೆ. ಜಮೀರ್ ಅಶ್ವಮೇಧವನ್ನು ಕಲಬುರಗಿ, ಬೀದರ್ ಸೇರಿ ಯಾರೂ ತಡೆಯಲಿಲ್ಲ. ನಾನು ಜಮೀರ್ ಅಶ್ವಮೇಧ ಕುದುರೆಯನ್ನು ವಿಜಯಪುರದಲ್ಲಿ ತಡೆದಿದ್ದೇನೆ.

– **ಬಸನಗೌಡ ಪಾಟೀಲ್ ಯತ್ನಾಳ,** ಬಿಜೆಪಿ ಶಾಸಕ



ಬೊಮ್ಮಾಯಿ ಸರಕಾರ ಇದ್ದಾಗಲೇ ಧಾರವಾಡದ ಜಿಲ್ಲಾಧಿಕಾರಿಗಳಿಗೆ ಕೇಳಿ ನೋಟಿಸ್ ಕೊಟ್ಟು ದಾಖಲೆ ತಿದ್ದಲಾಗಿದೆ. ಮುಖ್ಯಮಂತ್ರಿ ಈಗಾಗಲೇ ಆ ಬಗೆಗಿನ ದಾಖಲೆಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ನಮ್ಮ ಕಂದಾಯ ಸಚಿವರೂ ದಾಖಲೆಗಳನ್ನು ಬಿಡುಗಡೆ ಮಾಡುತ್ತಾರೆ. ತಾಂತ್ರಿಕವಾಗಿ ಕೆಲವು ಅಧಿಕಾರಿಗಳು ತಪ್ಪುಗಳನ್ನು ಮಾಡಿರಬಹುದು. ಎಲ್ಲ ರೈತರಿಗೆ ರಕ್ಷಣೆ ಕೊಡುವಂತಹ ಕೆಲಸ ನಮ್ಮ ಸರಕಾರ ಮಾಡುತ್ತದೆ.

– **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ



ಜಂಟಿ ಸಂಸದೀಯ ಸಮಿತಿ ಅಧ್ಯಕ್ಷರ ರಾಜ್ಯ ಭೇಟಿ ರಾಜಕೀಯ ದುರುದ್ದೇಶದಿಂದ ಕೂಡಿದೆ. ಕಮಿಟಿಯ ಸದಸ್ಯರನ್ನು ಬಿಟ್ಟು ಬರುತ್ತಿದ್ದಾರೆ. ಅವರು ಆ ರೀತಿ ಒಬ್ಬರೇ ಬರುವ ಹಾಗಿಲ್ಲ ಎಂದು ಸಮಿತಿಯ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

– **ಡಾ.ಜಿ.ಪರಮೇಶ್ವರ್** ಗೃಹ ಸಚಿವ

ಆಡಳಿತ-ಪ್ರತಿಪಕ್ಷ ಸದಸ್ಯರ ನಡುವೆ ಹೊಯ್ ಕೈ

ಮೊಳಗಿದ ಘೋಷಣೆಗಳು, ತಾರಕಕ್ಕೇರಿದ ಗದ್ದಲ

ಜಮ್ಮು-ಕಾಶ್ಮೀರ ಸದನ ರಣರಂಗ

ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ಶಾಸಕರು ಪರಸ್ಪರ ಕೈಕೈ ಮಿಲಾಯಿಸಿದರು.

ಶ್ರೀನಗರ: 370ನೇ ವಿಧಿ ಮತ್ತು 35ಎ ಮರುಜಾರಿಗೆ ಆಗ್ರಹಿಸಿ ಹಾಗೂ ರಾಜಕೀಯ ಕೈದಿಗಳ ಬಿಡುಗಡೆಗೆ ಒತ್ತಾಯಿಸಿ ಶಾಸಕರೊಬ್ಬರು ಜಮ್ಮು-ಕಾಶ್ಮೀರ ವಿಧಾನಸಭೆಯಲ್ಲಿ ಗುರುವಾರ ಬ್ಯಾನರ್ ಪ್ರದರ್ಶಿಸಿದ್ದರಿಂದ ಸದನದಲ್ಲಿ ಭಾರೀ ಗದ್ದಲ ಉಂಟಾಗಿದೆ. ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ಶಾಸಕರು ಪರಸ್ಪರ ಕೈಕೈ ಮಿಲಾಯಿಸಿದ್ದು, ಸದನದಲ್ಲಿ ದೊಡ್ಡ ಕದನವೇ ನಡೆದುಹೋಗಿದೆ.

370ನೇ ವಿಧಿ ಮತ್ತು 35ಎ ಮರುಜಾರಿಗೆ ಆಗ್ರಹಿಸಿ ಹಾಗೂ ರಾಜಕೀಯ ಕೈದಿಗಳ ಬಿಡುಗಡೆಗೆ ಒತ್ತಾಯಿಸುವ ಬ್ಯಾನರನ್ನು ಅವಾಮಿ ಇತ್ತೆಹಾದ್ ಪಕ್ಷದ ಶಾಸಕ ಲಂಗೇಟ್ ಷೇಕ್ ಖುರ್ಷಿದ್ ಅಹಮದ್ ಗುರುವಾರ ಸದನದ ಬಾವಿಗಿಳಿದು ಪ್ರದರ್ಶಿಸಿದರು. ಇದನ್ನು ತೀವ್ರವಾಗಿ ವಿರೋಧಿಸಿದ ಬಿಜೆಪಿ ಶಾಸಕರು, ಆಕ್ರೋಶ ವ್ಯಕ್ತಪಡಿಸಿ ಬ್ಯಾನರ್ ಕಿತ್ತುಕೊಳ್ಳಲು ಮುಂದಾದರು. ಆಗ ಬಿಜೆಪಿ ಸದಸ್ಯರನ್ನು ಮಾರ್ಷಲ್‌ಗಳು ತಡೆದರು. ಪಟ್ಟು ಬಿಡದ ಬಿಜೆಪಿ ಶಾಸಕರು ಬ್ಯಾನರ್ ಕಿತ್ತುಕೊಂಡರು. ಆಗ ಮಾರ್ಷಲ್‌ಗಳು ಬಿಜೆಪಿ ಸದಸ್ಯರ ಕೈನಿಂದ ಬ್ಯಾನರ್ ಕಿತ್ತುಕೊಳ್ಳಲು ಮುಂದಾದರು. ಆಗ ಆಡಳಿತ ಪಕ್ಷದ ಶಾಸಕರು, ಪ್ರತಿಪಕ್ಷ ಸದಸ್ಯರು, ಮಾರ್ಷಲ್‌ಗಳ ನಡುವೆ ಕೆಲ ನಿಮಿಷಗಳ ಕಾಲ ತಳ್ಳಾಟ, ನೂಕಾಟ ನಡೆಯಿತು.

ಬ್ಯಾನರ್ ಪ್ರದರ್ಶನ ಖಂಡಿಸಿ ಬಾವಿಗಿಳಿದು ಪ್ರತಿಭಟನೆ ನಡೆಸಿದ ಪ್ರತಿಪಕ್ಷ ಬಿಜೆಪಿ ಸದಸ್ಯರ ಮೇಲೆ ಆಡಳಿತ ಪಕ್ಷದ ಸದಸ್ಯರು ಹಲ್ಲೆ ಮಾಡಿದರು. ಬಿಜೆಪಿ ಶಾಸಕರೊಬ್ಬರ ಶಲ್ಯ ಕುತ್ತಿಗೆ ಸುತ್ತು ಹಾಕಿ ಎಳೆದಾಡಿ ಥಳಿಸಿದರು. ಪಿಡಿಪಿ, ಎನ್‌ಸಿ, ಕಾಂಗ್ರೆಸ್ ಶಾಸಕರು ಹಾಗೂ ಬಿಜೆಪಿ ಶಾಸಕರ ನಡುವೆ ಹೊಡೆದಾಟ ನಡೆಯಿತು.

→ 4



- ಬುಧವಾರ ಅಂಗೀಕಾರವಾಗಿದ್ದ 370 ಮರುಜಾರಿ ನಿರ್ಣಯ
- ನಿರ್ಣಯ ವಿರೋಧಿಸಿ ಬಿಜೆಪಿಯಿಂದ ಸದನದಲ್ಲಿ ಪ್ರತಿಭಟನೆ
- ಪ್ರತಿಪಕ್ಷ ನಾಯಕ ಸುನಿಲ್ ಮಾತಿಗೆ ಆಡಳಿತ ಪಕ್ಷ ವಿರೋಧ
- ಅವಾಮಿ ಇತ್ತೆಹಾದ್ ಪಕ್ಷದ ಲಂಗೇಟ್ ಬ್ಯಾನರ್ ಪ್ರದರ್ಶನ
- ಬ್ಯಾನರ್ ಕಿತ್ತುಕೊಳ್ಳಲು ಬಿಜೆಪಿ ಶಾಸಕರ ಯತ್ನ-ಘೋಷಣೆ
- ಬ್ಯಾನರ್ ಮರು ವಶಕ್ಕೆ ಬಿಜೆಪಿ ಜತೆ ಮಾರ್ಷಲ್‌ಗಳ ಸೆಣಸಾಟ
- ಘೋಷಣೆ ನಿಲ್ಲಿಸದ 3 ಬಿಜೆಪಿ ಶಾಸಕರು ಸದನದಿಂದ ಹೊರಕ್ಕೆ
- ಬಿಜೆಪಿ ಶಾಸಕರ ವಿರುದ್ಧ ಮಾರ್ಷಲ್‌ಗಳಿಂದ ಬಲ ಪ್ರಯೋಗ
- 2 ಬಾರಿ ಕಲಾಪ ಮುಂದೂಡಿದ ಸ್ಪೀಕರ್ ಅಬ್ದುಲ್ ರಹೀಮ್

ದಾರಿದೀಪೋಕ್ತಿ

ನೀವು ನಿಮ್ಮ ಕೋಪವನ್ನು ಪ್ರದರ್ಶಿಸುವುದು ತಪ್ಪಲ್ಲ. ಅದೂ ಕೂಡ ಒಂದು ಉತ್ತಮ ಗುಣವೇ. ಆದರೆ ಅದು ಯಾವ ಕಾರಣಕ್ಕೂ ಕ್ರೌರ್ಯಕ್ಕೆ ತಿರುಗದಂತೆ ಎಚ್ಚರವಹಿಸಬೇಕು. ಕೋಪ ಯಾವತ್ತೂ ನಿಮ್ಮ ನಿಯಂತ್ರಣದಲ್ಲಿರಬೇಕು. ಅದು ನಿಮ್ಮಲ್ಲಿ ಪಶ್ಚಾತ್ತಾಪವನ್ನುಂಟು ಮಾಡಬಾರದು.

ವಕ್ರತುಂಡೋಕ್ತಿ

ವ್ಯಕ್ತಿಗಳ ಬಣ್ಣದಿಂದ ಅವರ ವ್ಯಕ್ತಿತ್ವ ಗೊತ್ತಾಗುವುದಿಲ್ಲ. ಆದರೆ ಅವರ ಹಲ್ಲಿನ ಬಣ್ಣದಿಂದಂತೂ ಗೊತ್ತಾಗುತ್ತದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ವಕ್ಫ್ ಬೋರ್ಡ್ ಆಸ್ತಿ ಒತ್ತುವರಿ ವಿವಾದ ಸುದ್ದಿ



5.53 ಲಕ್ಷ ಕೋಟಿ ರು.ಗೆ ತಲುಪಲಿದೆ ರಾಜ್ಯದ ಸಾಲದ ಮೊತ್ತ

40,000 ಕೋಟಿ ರು.ಗೂ ಹೆಚ್ಚು ಬಡ್ಡಿ ಕಟ್ಟುತ್ತಿರುವ ಸರಕಾರ

40,000 ಕೋಟಿ ರು. ಸಾಲ ಪಡೆಯಲು ಆರ್‌ಬಿಐ ಅಸ್ತು

ಬೆಂಗಳೂರು: ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ ತಲಾ 40 ಸಾವಿರ ಕೋಟಿ ರು. ಅಭಿವೃದ್ಧಿ (ಸರಳ) ಸಾಲ ಪಡೆಯಲು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ರಾಜ್ಯ ಸರಕಾರ ಅನುಮತಿ ಪಡೆದುಕೊಂಡಿದೆ. ಇದರೊಂದಿಗೆ ರಾಜ್ಯದ ಒಟ್ಟಾರೆ ಸಾಲದ ಮೊತ್ತ 5.53 ಲಕ್ಷ ಕೋಟಿ ರು.ಗೆ ತಲುಪಲಿದೆ.

ಪ್ರಸಕ್ತ ಬಜೆಟ್‌ನಲ್ಲಿ ಕೇಂದ್ರ ಸರಕಾರದಿಂದ 6,855 ಕೋಟಿ ರು. ಹಾಗೂ ಮುಕ್ತ ಮಾರುಕಟ್ಟೆಯಿಂದ 96,840 ಕೋಟಿ ರು. ಸೇರಿ ಒಟ್ಟು 1.05 ಲಕ್ಷ ಕೋಟಿ ರು. ಸಾಲ ಪಡೆಯುವ ಅಂದಾಜು ಮಾಡಿದ್ದ ಸರಕಾರ, ಸೆಪ್ಟಂಬರ್‌ವರೆಗೆ 4 ಸಾವಿರ ಕೋಟಿ ರು. ಸಾರ್ವಜನಿಕ ಸಾಲ ಮಾಡಿದೆ. ಜತೆಗೆ ಮುಕ್ತ ಮಾರುಕಟ್ಟೆಯಿಂದ 3 ಸಾವಿರ ಕೋಟಿ ರು. ಸಾಲ ಪಡೆದಿತ್ತು.

ಅಕ್ಟೋಬರ್‌ನಲ್ಲಿ ಮುಕ್ತ ಮಾರುಕಟ್ಟೆಯಿಂದ 20 ಸಾವಿರ ಕೋಟಿ ರು. ಅಭಿವೃದ್ಧಿ ಸಾಲ ಪಡೆಯಲು ಆರ್‌ಬಿಐನಿಂದ ಅನುಮತಿ ಪಡೆದಿದ್ದ ಸರಕಾರ, ಇದೀಗ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ತಲಾ 20 ಸಾವಿರ ಕೋಟಿ ರು.ಗಳಂತೆ ಇನ್ನೂ 40 ಸಾವಿರ ಕೋಟಿ ರುಪಾಯಿ ಅಭಿವೃದ್ಧಿ ಸಾಲಕ್ಕೆ ಅನುಮತಿ ಪಡೆದುಕೊಂಡಿದೆ. ಇದೂ ಸೇರಿದಂತೆ ಡಿಸೆಂಬರ್ ಅಂತ್ಯಕ್ಕೆ 67 ಸಾವಿರ ಕೋಟಿ ರು. ಸಾಲ ಪಡೆದಂತಾಗಲಿದೆ.

ಈಗಾಗಲೇ ವಾರ್ಷಿಕ ಬಡ್ಡಿ ರೂಪದಲ್ಲಿ 40 ಸಾವಿರ ಕೋಟಿ ರು.ಗೂ ಹೆಚ್ಚು ಮೊತ್ತ ಪಾವತಿಸುತ್ತಿರುವ ಸರಕಾರ, ನೌಕರರ ವೇತನ ಪರಿಷ್ಕರಣೆ, ಗ್ಯಾರಂಟಿ ಯೋಜನೆ ಸೇರಿದಂತೆ ಹಲವು ಬದ್ಧತಾ ವೆಚ್ಚಗಳ ಭಾರವನ್ನೂ ಹೊತ್ತಿದೆ.

ವಿತ್ತೀಯ ಕೊರತೆ

ವಿತ್ತೀಯ ಹೊಣೆಗಾರಿಕೆ ಅಧಿನಿಯಮ-2002ರ ಅನ್ವಯ ವಿತ್ತೀಯ ಕೊರತೆಯು ಜಿಎಸ್‌ಡಿಪಿಯ ಶೇ.3ರೊಳಗೆ ಇರಬೇಕು. ಅಂತೆಯೇ ಸಾಲದ ಪ್ರಮಾಣವು ಶೇ.25ರೊಳಗೆ ಇರಬೇಕು. ಪ್ರಸ್ತುತ ವಿತ್ತೀಯ ಕೊರತೆಯು ಜಿಎಸ್‌ಡಿಪಿಯ ಶೇ.2.95ರಷ್ಟಿದ್ದು, ಸಾಲದ ಪ್ರಮಾಣವು ಶೇ.23.68ಕ್ಕೆ ತಲುಪಿದೆ. ಬದ್ಧತಾ ವೆಚ್ಚದ ಜತೆಗೆ ಸಾಲ ಮರುಪಾವತಿ ಯತ್ತಲೂ ಸರಕಾರ ಗಮನ ಹರಿಸದಿದ್ದರೆ, ಸಾರ್ವಜನಿಕ ಆಸ್ತಿ ನಗದೀಕರಣ, ಸಬ್ಸಿಡಿಗಳ ಕಡಿತದಂತಹ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಾದ ಅನಿವಾರ್ಯ ಸಹ ಎದುರಾಗಬಹುದು ಎಂದು ಮಧ್ಯಮಾವಧಿ ವಿತ್ತೀಯ ಯೋಜನೆ ಸಹ ಎಚ್ಚರಿಸಿತ್ತು.

ಬಿಜೆಪಿ ರಾಷ್ಟ್ರಾಧ್ಯಕ್ಷರ ರೇಸ್‌ನಲ್ಲಿ ಕನ್ನಡಿಗ?

ಬೆಂಗಳೂರು: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಬಳಿಕ ಬಿಜೆಪಿ ರಾಷ್ಟ್ರಾಧ್ಯಕ್ಷರು ಬದಲಾವಣೆಯಾಗುವುದು ಬಹುತೇಕ ಖಚಿತವಾಗಿದ್ದು, ರೇಸ್‌ನಲ್ಲಿ ಕನ್ನಡಿಗರ ಹೆಸರೊಂದು ಮುನ್ನೆಲೆಗೆ ಬಂದಿದೆ. ಜೆ.ಪಿ.ನಡ್ಡಾ ಅವರು ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿರುವುದರಿಂದ ರಾಷ್ಟ್ರೀಯ ಅಧ್ಯಕ್ಷರ ಬದಲಾವಣೆ ಖಚಿತವಾಗಿದೆ. ಈಗಾಗಲೇ ಹಲವು ಹೆಸರುಗಳು ಓಡಾಡುತ್ತಿದ್ದು, ಇವುಗಳ ಪೈಕಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿ ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ಬಿ.ಎಲ್.ಸಂತೋಷ್ ಅವರ ಹೆಸರು ಕೇಳಿಬಂದಿದೆ. ಅವರೊಂದಿಗೆ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಭೂಪೇಂದ್ರ ಯಾದವ್ ಮತ್ತು ಮಹಾರಾಷ್ಟ್ರದ ವಿನೋದ್ ಥಾವಡೆ ಹೆಸರುಗಳು ರೇಸಿನಲ್ಲಿವೆ. ಒಂದು ವೇಳೆ ಸಂತೋಷ್ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನ ಪಡೆದರೆ, ಈ ಹುದ್ದೆಗೆ ಏರಿದ ಮೊದಲ ಕನ್ನಡಿಗರಾಗುತ್ತಾರೆ.

ನಕ್ಸಲ್ ಕೂಬಿಂಗ್ ಕಾರ್ಯಾಚರಣೆ

ಚಿಕ್ಕಮಗಳೂರು: ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಆರು ಜನ ನಕ್ಸಲರು ಓಡಾಡಿದ್ದಾರೆ ಎಂಬ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ನಕ್ಸಲ್ ನಿಗ್ರಹ ಪಡೆಯಿಂದ ಕೂಂಬಿಂಗ್ ಕಾರ್ಯಾಚರಣೆ ಚುರುಕು ಗೊಂಡಿದೆ. ಕಳಸ, ಶೃಂಗೇರಿ ತಾಲೂಕಿನ ಘಟ್ಟ ಪ್ರದೇಶಗಳಲ್ಲಿ ಕೂಂಬಿಂಗ್ ಕಾರ್ಯಾಚರಣೆ ಆರಂಭಗೊಂಡಿದೆ.

ದೆಹಲಿ, ಮುಂಬೈ ಮೂಲದ ಕಂಪನಿಗಳ ಮೇಲೆ ಐಟಿ ದಾಳಿ

ಬೆಂಗಳೂರಿನಲ್ಲಿ ಐಟಿ, ಇಡಿ ಸದ್ದು

ಬೆಂಗಳೂರು: ರಾಜಧಾನಿಯ ಕೆಲವು ಕಂಪನಿಗಳ ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ತಂಡ ಗುರುವಾರ ಬೆಳ್ಳಂಬೆಳಗ್ಗೆ ದಾಳಿ ನಡೆಸಿದೆ.

ದೆಹಲಿ ಮತ್ತು ಮುಂಬೈ ಮೂಲದ ಕಂಪನಿಗಳ ಮೇಲೆ ದಾಳಿ ಐಟಿ ನಡೆಸಿ ಪರಿಶೀ ಲನೆ ನಡೆಸಲಾಗಿದೆ. ಇವುಗಳ ಬೆಂಗಳೂರಿನ ಬ್ಯಾಂಚ್ ಆಫೀಸ್‌ಗಳಲ್ಲಿ ಐಟಿ ಅಧಿಕಾರಿಗಳು ಪರಿಶೀಲನೆ ನಡೆಸಿ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. ಚನ್ನಪ ಟ್ಟಣ, ಶಿಗ್ಗಾಂವಿ ಸೇರಿದಂತೆ ರಾಜ್ಯದ ಮೂರು ಕಡೆಗಳಲ್ಲಿ ನಡೆಯುತ್ತಿರುವ ಉಪಚುನಾ ವಣೆಗೂ ಈ ಐಟಿ ದಾಳಿಗೂ ಸಂಬಂಧವಿದೆ ಎಂದು ಹೇಳಲಾಗುತ್ತಿದೆ. ಹೆಚ್ಚಾಗಿ ಜ್ಯುವೆಲ್ಲರಿಗಳು ತೆರಿಗೆ ಹಣ ವಂಚಿಸುತ್ತಿದ್ದು , ಇವು ಐಟಿ ದಾಳಿಗಳಿಗೆ ಪದೇ ಪದೆ ತುತ್ತಾಗುತ್ತಿವೆ. ಕಂಪನಿಗಳು ತೆರಿಗೆ ವಂಚನೆ ದೂರುಗಳು ಕೇಳಿ ಬಂದ ಹಿನ್ನಲೆಯಲ್ಲಿ ದಾಳಿ ನಡೆಸಲಾಗಿದೆ.

ಅಮೆಜಾನ್‌ಗೆ ಇ.ಡಿ ಬಿಸಿ

ಗೌರಿ-ಗಣೇಶ ನಂತರ ದೀಪಾವಳಿ ಹಬ್ಬದ ಸಂಭ್ರಮದಲ್ಲಿ ಭಾರೀ ವಹಿವಾಟು ನಡೆಸಿದ್ದ ಆನ್‌ಲೈನ್ ಮಾರಾಟ ತಾಣಗಳಾದ ಅಮೆಜಾನ್ ಮತ್ತು ಫ್ಲಿಪ್ ಕಾರ್ಟ್‌ಗೆ ಜಾರಿ ನಿರ್ದೇಶನಾಲಯ (ಇ.ಡಿ.) ಗುರುವಾರ ಬಿಸಿ ಮುಟ್ಟಿಸಿದೆ. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ) ಅಡಿಯಲ್ಲಿ ಇ.ಡಿ ಅಧಿಕಾರಿಗಳ ದೊಡ್ಡ ತಂಡ, ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್‌ಗೆ ಸೇರಿದ ಬೆಂಗಳೂರು, ಹೈದರಾಬಾದ್, ದೆಹಲಿ ಸೇರಿ ದೇಶದ ವಿವಿಧೆಡೆಯ 16 ಕಚೇರಿ ಮತ್ತು ಗೋದಾಮುಗಳ ಮೇಲೆ ಹಾಗೂ ಎರಡೂ ಸಂಸ್ಥೆಗಳ ಮಾರಾಟ ಘಟಕಗಳ ಮೇಲೆ ಅಚ್ಚರಿಯ ದಾಳಿ ನಡೆಸಿ ಶೋಧ ಕೈಗೊಂಡಿದೆ.

ಪವಿತ್ರಾ ಜಾಮೀನು ಅರ್ಜಿ ಮುಂದಕ್ಕೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎ1 ಆರೋಪಿ ಪವಿತ್ರಾಗೌಡ ಸೇರಿದಂತೆ ಐವರ ಜಾಮೀನು ಅರ್ಜಿ ವಿಚಾರಣೆಯನ್ನು ನ.21 ಕ್ಕೆ ಹೈಕೋರ್ಟ್ ಮುಂದೂಡಿದೆ. ಪವಿತ್ರಾಗೌಡ, ನಾಗರಾಜ್, ಲಕ್ಷ್ಮಣ್, ಅನುಕುಮಾರ್ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಕೋರ್ಟ್‌ಗೆ ಆಗಮಿಸಿದ್ದ ಪವಿತ್ರಾಗೌಡ ತಾಯಿ, ಮಗಳಿಗೆ ಜಾಮೀನು ಸಿಗದ ಹಿನ್ನಲೆಯಲ್ಲಿ ಬೇಸರದಿಂದಲೇ ಹೊರನಡೆದರು. ಕೊಲೆ ಪ್ರಕರಣದಲ್ಲಿ ಎ2 ಆರೋಪಿ ದರ್ಶನ್ ಜಾಮೀನು ಅರ್ಜಿಯೂ 21ಕ್ಕೆ ವಿಚಾರಣೆ ನಡೆಯಲಿದೆ. ಸದ್ಯ ಮಧ್ಯಂತರ ಜಾಮೀನು ಪಡೆದು ದರ್ಶನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಂಚಿಕೆ ರದ್ದತಿಗೆ ಪ್ರಾಧಿಕಾರದ ಸಭೆಯಲ್ಲಿ ಒಮ್ಮತದ ನಿರ್ಣಯ

ಮುಡಾ: 50:50 ನಿವೇಶನಗಳಿಗೆ ಕಂಟಕ

ಮೈಸೂರು: ಅಕ್ರಮ ಪ್ರಕರಣ ಬೆಳಕಿಗೆ ಬಂದ ಬಳಿಕ ಇದೇ ಮೊದಲ ಬಾರಿಗೆ ಮುಡಾ ಸಭೆ ನಡೆಸಿದ್ದು, ಈ ಸಭೆಯಲ್ಲಿ 50:50 ನಿವೇಶನ ಗಳನ್ನು ಜಪ್ತಿ ಮಾಡಲು ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ. ಗುರುವಾರ ನಡೆದ ಮುಡಾ ಸಭೆಯಲ್ಲಿ 50-50 ಸೈಟಗಳ ಜಪ್ತಿಗೆ ಸದಸ್ಯರು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದ್ದು, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ವರದಿ ಬಂದ ಬಳಿಕ ಜಪ್ತಿಯ ವರದಿ ಅಂಗೀ ಕರಿಸಲು ತೀರ್ಮಾನಿಸಲಾಗಿದೆ. ಈ ಮೂಲಕ ಅಕ್ರಮವಾಗಿ 50:50 ಸೈಟ್ ಪಡೆದವರಿಗೆ ಸಂಕಷ್ಟ ಕಟ್ಟಿಟ್ಟ ಬುತ್ತಿ ಎನ್ನಲಾಗಿದೆ. ನಿವೇಶನ ಜಪ್ತಿಯಾದ ಬಳಿಕ ಕಾನೂನು ಬದ್ಧವಾಗಿ ದ್ದವರಿಗೆ ವಾಪಸ್ ನೀಡಲು ತೀರ್ಮಾನಕ್ಕೆ ಬರಲಾಗಿದೆ. ಇದೇ ತಿಂಗಳ 21ರಂದು ಮತ್ತೊ ಂದು ಸಾಮಾನ್ಯ ಸಭೆಯ ದಿನಾಂಕ ನಿಗದಿಯಾಗಿದೆ.

ಡಿ.ರೂಪಾಗೆ ಹಿನ್ನಡೆ

ದೆಹಲಿ: ಐಎಎಸ್ ರೋಹಿಣಿ ಸಿಂಧೂರಿ ಸಲ್ಲಿಸಿರುವ ಮಾನನಷ್ಟ ಮೊಕದ್ದಮೆ ರದ್ದು ಕೋರಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದ ಐಪಿಎಸ್ ಡಿ.ರೂಪಾ ಮೌದ್ಗಿಲ್ ತಮ್ಮ ಅರ್ಜಿಯನ್ನು ವಾಪಸ್ ಪಡೆದಿದ್ದಾರೆ. ಅರ್ಜಿ ವಾಪಸ್ ಪಡೆಯದಿದ್ದರೆ ವಜಾ ಮಾಡುವುದಾಗಿ ಕೋರ್ಟ್ ಎಚ್ಚರಿಕೆ ನೀಡಿದ ಬಳಿಕ ಅರ್ಜಿ ವಾಪಸ್ ಪಡೆದಿದ್ದಾರೆ.

ರೈಲಿನಂಥ ಸಾಲಿದ್ದರೆ ಇದ್ದಲ್ಲಿಯೇ ರೈಲು ಟಿಕೆಟ್

ರೈಲು ಟಿಕೆಟ್ ಇನ್ನಷ್ಟು ಹತ್ತಿರ

● ಅಪರ್ಣಾ ಎ.ಎಸ್.

ಬೆಂಗಳೂರು: ಸೀಟು ಕಾಯ್ದಿರಿಸದೇ ಇರುವ ಪ್ರಯಾಣಿಕರಿಗೆ ಇನ್ನಷ್ಟು ಗ್ರಾಹಕಸ್ನೇಹಿ ಕ್ರಮ ಕೈಗೊಳ್ಳಲು ಮುಂದಾಗಿರುವ ನೈಋತ್ಯ ರೈಲ್ವೇ ಇಲಾಖೆ ಇದೀಗ ವಿನೂತನ ಯೋಜನೆಯೊಂದನ್ನು ಆರಂಭಿಸಿದೆ.

ಸಾಮಾನ್ಯ ಬೋಗಿಗಳಲ್ಲಿ ಪ್ರಯಾಣಿಸುವವರು ನಿಲ್ದಾಣಕ್ಕೆ ತೆರಳಿ ಕೆಲ ಗಂಟೆಗಳ ಮೊದಲು ಟಿಕೆಟ್ ಖರೀದಿಸಬೇಕು. ಆದರೆ ಅನೇಕ ಸಮಯದಲ್ಲಿ, ದೊಡ್ಡ ಸರತಿ ಸಾಲುಗಳಿರುವುದರಿಂದ ಅನೇಕರಿಗೆ ಟಿಕೆಟ್ ತಪ್ಪುವ ಸಾಧ್ಯತೆಯಿರುತ್ತದೆ. ಇದೀಗ ರೈಲ್ವೆ ಇಲಾಖೆಯು ನಗರದಲ್ಲಿ ಪ್ರಾಯೋಗಿಕವಾಗಿ ಪ್ರಯಾಣಿಕರು ಕ್ಯೂನಿಂತ ಜಾಗದಲ್ಲಿಯೇ ಅವರಿಗೆ ಟಿಕೆಟ್ ತಲುಪಿಸುವ ವ್ಯವಸ್ಥೆಯನ್ನು ಪರಿಚಯಿಸಿದ್ದು, ಕಾಯ್ದಿರಿಸದ ಮೊಬೈಲ್ ಕೌಂಟರ್ ಮೂಲಕ ಟಿಕೆಟ್ ವ್ಯವಸ್ಥೆ ಮಾಡಿರುವುದರಿಂದ ಪ್ರಯಾಣಿಕರು ನಿಂತಲ್ಲಿಯೇ ರೈಲ್ವೆ ಟಿಕೆಟ್‌ನ್ನು ಪಡೆಯಬಹುದಾಗಿದೆ.

ನೈಋತ್ಯ ರೈಲ್ವೆ ನಗರದ ಜನದಟ್ಟಣೆಯ ಮೂರು ರೈಲ್ವೆ ನಿಲ್ದಾಣಗಳಲ್ಲಿ ಸರತಿಯಲ್ಲಿ ನಿಂತ ಪ್ರಯಾಣಿಕರ ಕೈಗೆ ಟಿಕೆಟ್ ನೀಡುವ ವ್ಯವಸ್ಥೆಯನ್ನು ಮಾಡಿದ್ದು, ನಿಲ್ದಾಣದ 500ಮೀ. ವ್ಯಾಪ್ತಿಯಲ್ಲಿ ಪ್ರಯಾಣಿಕರು ಟಿಕೆಟ್‌ಗಾಗಿ ಸಾಲುಗಟ್ಟಿ ನಿಂತಿದ್ದರೆ ಈ ಸೌಲಭ್ಯದಿಂದಾಗಿ ನಿಂತ ಜಾಗದಲ್ಲಿಯೇ ಟಿಕೆಟ್ ಖರೀದಿ ಮಾಡಬಹುದಾಗಿದೆ. ಈ ವ್ಯವಸ್ಥೆಯಲ್ಲಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್‌ಗೆ ಹಣ ಪಾವತಿಸುವ ವ್ಯವಸ್ಥೆಯನ್ನು ಕಲ್ಪಿಸಿದೆ.

→ 4

ಮೊಬೈಲ್ ಕೌಂಟರ್‌ಗಳ ವಿಶೇಷತೆ

- ಭಾರಿ ಜನದಟ್ಟಣೆ ಇರುವ ಸಮಯದಲ್ಲಿ ಸರತಿಯಲ್ಲಿ ನಿಂತಿರುವಲ್ಲಿಯೇ ಟಿಕೆಟ್ ಹಂಚಿಕೆ
- ಇದಕ್ಕಾಗಿ ನೈಋತ್ಯ ರೈಲ್ವೇ ಇಲಾಖೆಯಿಂದ ಪ್ರತ್ಯೇಕ ಟಿಕೆಟಿಂಗ್ ಯಂತ್ರಗಳ ಖರೀದಿ
- 500 ಮೀಟರ್ ವ್ಯಾಪ್ತಿಯಲ್ಲಿ ಸರತಿಯಿದ್ದರೆ, ಸಿಬ್ಬಂದಿಗಳಿಂದ ಟಿಕೆಟ್ ಹಂಚಿಕೆ, ಪ್ರಾಯೋಗಿಕವಾಗಿ ಬೆಂಗಳೂರಿನ ಪ್ರಮುಖ ಮೂರು ರೈಲು ನಿಲ್ದಾಣದಲ್ಲಿ ಜಾರಿ
- ಗ್ರಾಹಕರ ಪ್ರತಿಕ್ರಿಯೆ, ಈ ಯೋಜನೆಯ ಸಾಧಕ-ಬಾಧಕ ಗಮನಿಸಿ ಇತರೆ ನಿಲ್ದಾಣಗಳಿಗೆ ವಿಸ್ತರಣೆ

ಟಿಬಿ ಡ್ಯಾಂ ಗೇಟ್ ಮುರಿದ ಬೆನ್ನಲ್ಲೇ ಗಂಭೀರ ಚಿಂತನೆ | 10 ಸಾವಿರ ಕೋಟಿ ರು. ವೆಚ್ಚದಲ್ಲಿ ಕಾಯಕಲ್ಪ

ಅಣೆಕಟ್ಟುಗಳ ರಿಪೇರಿಗೆ ಸಿದ್ಧತೆ

ವಿಶ್ವವಾಣಿ ವಿಶೇಷ

ಬೆಂಗಳೂರು: ಕೆಲ ತಿಂಗಳ ಹಿಂದೆ ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್ ಮುರಿದು ಸಂಭವಿಸಿದ ಭಾರಿ ಅನಾಹುತದಿಂದ ಎಚ್ಚೆತ್ತಿರುವ ನೀರಾವರಿ ಇಲಾಖೆಯು ರಾಜ್ಯದಲ್ಲಿರುವ ಪ್ರಮುಖ ಜಲಾಶಯಗಳ ಪುನಶ್ಚೇತನಕ್ಕೆ ಸಿದ್ಧತೆ ನಡೆಸಿಕೊಂಡಿದೆ.

ಯಾವುದೇ ಒಂದು ಜಲಾಶಯ ನಿರ್ಮಾಣಗೊಂಡ 50 ವರ್ಷಗಳ ಬಳಿಕ ಅದರ ಕ್ರಸ್ಟ್‌ಗೇಟ್ ಸೇರಿದಂತೆ ಇತರೆ ವಸ್ತುಗಳನ್ನು ಬದಲಾಯಿಸಬೇಕು ಎನ್ನುವ ತಜ್ಞರ ವರದಿ ಇದೆ. ಆದರೆ ಕರ್ನಾಟಕದಲ್ಲಿರುವ ಬಹುತೇಕ ಬೃಹತ್ ಜಲಾಶಯಗಳು ನಿರ್ಮಾಣಗೊಂಡು 75ರಿಂದ ನೂರು ವರ್ಷ ಕಳೆದರೂ ಗೇಟ್‌ಗಳನ್ನು ಬದಲಾಯಿಸಿಲ್ಲ. ಆದ್ದರಿಂದ ಇದೀಗ ಹಂತಹಂತವಾಗಿ ಜಲಾಶಯಗಳ ಗೇಟ್‌ಗಳನ್ನು ಬದಲಾಯಿಸುವ ಯೋಜನೆಯನ್ನು ಇಲಾಖೆ ಕೈಗೆತ್ತಿಕೊಂಡಿದೆ.

ಮುಂಗಾರು ಮಳೆಗಾಲದ ಸಮಯದಲ್ಲಿ ಟಿಬಿ ಜಲಾಶಯಗಳ 17ನೇ ಗೇಟ್ ಕೊಚ್ಚಿಹೋಗಿ ಭಾರಿ ಅವಾಂತರ ಸೃಷ್ಟಿಸಿತ್ತು. ಇದರಿಂದ ಎಚ್ಚೆತ್ತ ನೀರಾವರಿ ಇಲಾಖೆ 50 ವರ್ಷ ಪೂರ್ಣಗೊಳಿಸಿರುವ ಜಲಾಶಯಗಳ ಗೇಟ್‌ಗಳನ್ನು ಬದಲಾಯಿಸಲು ಅಥವಾ ದುರಸ್ತಿ ಕಾಮಗಾರಿ ನೆರವೇರಿಸಲು ಚಿಂತನೆ ನಡೆಸಿದೆ. ಏಕಕಾಲಕ್ಕೆ ಎಲ್ಲ ಜಲಾಶಯಗಳ ಗೇಟ್‌ಗಳನ್ನು ಬದಲಾಯಿಸಲು ಸುಮಾರು 10 ಸಾವಿರ ಕೋಟಿ ರು. ಅಗತ್ಯವಿದೆ. ಆದ್ದರಿಂದ ಈ ಅನುದಾನವನ್ನು ಭರಿಸಲು ಕೇಂದ್ರ ಸರಕಾರಕ್ಕೆ ಮನವಿ ಮಾಡುವ ಸಾಧ್ಯತೆಯಿದೆ.

ಬೃಹತ್ ಜಲಾಶಯಗಳ ಗೇಟ್‌ಗಳನ್ನು ಬದಲಿಸಲು ಈಗಿನಿಂದಲೇ ತಯಾರಿ ಆರಂಭಿಸಿದರೆ, ಮುಂದಿನ ಬೇಸಿಗೆಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಬಹುದು. ಒಂದೊಂದೇ ಜಲಾಶಯಗಳ ಬದಲಾವಣೆ ಮಾಡುವುದಕ್ಕಿಂತ ಕೇಂದ್ರ ಜಲಸಂಪನ್ಮೂಲ ಇಲಾಖೆಯಿಂದ ಆರ್ಥಿಕ ನೆರವಿನೊಂದಿಗೆ ನಿಗದಿತ ಸಮಯದಲ್ಲಿ ಎಲ್ಲ ಜಲಾಶಯಗಳ ರಿಪೇರಿ ಕಾರ್ಯ ಮಾಡುವ ಲೆಕ್ಕಾಚಾರದಲ್ಲಿ ರಾಜ್ಯ ಸರಕಾರವಿದೆ.

→ 4

ಏನಿದು ಡ್ರಿಪ್ಸ್ ಯೋಜನೆ?

- ಜಲಾಶಯಗಳ ಪುನಶ್ಚೇತನಕ್ಕೆಂದೇ ಕೇಂದ್ರ ಸರಕಾರ ರೂಪಿಸಿರುವ ಯೋಜನೆ
- ಪ್ರಮುಖ ಜಲಾಶಯಗಳ ಪುನಶ್ಚೇತನಕ್ಕೆ ಈ ಯೋಜನೆಯಲ್ಲಿ ಅನುದಾನ ಬಿಡುಗಡೆ
- ಕರ್ನಾಟಕ ಸೇರಿದಂತೆ ಏಳು ರಾಜ್ಯಗಳನ್ನು ಗಮನದಲ್ಲಿರಿಸಿಕೊಂಡು ಡ್ರಿಪ್ಸ್ ಸ್ಕೀಂ ಆರಂಭ
- ಕೇಂದ್ರ ಜಲಸಂಪನ್ಮೂಲ ಇಲಾಖೆ ಒಪ್ಪಿಗೆ ನೀಡಿದರೆ, ಬಹುಪಾಲು ಅನುದಾನ ಸಿಗುವ ಸಾಧ್ಯತೆ

ಡ್ರಿಪ್ಸ್ ಯೋಜನೆಯಿಂದ ಹಣ

ದೇಶದಲ್ಲಿರುವ ಜಲಾಶಯಗಳ ಪುನಶ್ಚೇತನ ಹಾಗೂ ದುರಸ್ತಿ ಕಾರ್ಯಗಳಿಗೆ ಅಗತ್ಯವಿರುವ ಅನುದಾನವನ್ನು ನೀಡುವುದಕ್ಕಾಗಿಯೇ ಕೇಂದ್ರ ಜಲಶಕ್ತಿ ಇಲಾಖೆಯು ಡ್ರಿಪ್ಸ್ ಎನ್ನುವ ಯೋಜನೆಯನ್ನು ಹೊಂದಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇದೀಗ ಈ ಯೋಜನೆಯಡಿ ಯಲ್ಲಿ ಅನುದಾನ ಪಡೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಸಮಾಚಾರ ಸಣ್ಣದಲ್ಲ

ಕಥೆಗಳ ಆಹ್ವಾನ

ಬೆಂಗಳೂರು: ಉಪಾಸನ ಪ್ರಕಾಶನವು ಸಣ್ಣಕಥೆಗಳ ಸಂಕಲನವನ್ನು ಹೊರತರಲು ಉದ್ದೇಶಿಸಿದ್ದು, ಅದಕ್ಕಾಗಿ ಆಸಕ್ತ ಬರಹಗಾರರಿಂದ ಕಥೆಗಳನ್ನು ಆಹ್ವಾನಿಸಲಾಗಿದೆ. ಆಯ್ಕೆಯಾದ 25 ಕಥೆಗಳನ್ನು ಸಂಕಲನದಲ್ಲಿ ಪ್ರಕಟಿಸಲಾಗುವುದು. ಬರಹಗಾರರು ತಮ್ಮ 3-12 ಪುಟಗಳ ಮಿತಿಯ ಅಪ್ರಕಟಿತ ಕಥೆಯನ್ನು ಕೆಳಗಿನ ಇಮೇಲ್ ವಿಳಾಸಕ್ಕೆ ಡಿ.15ರೊಳಗಾಗಿ ತಮ್ಮ ಹೆಸರು, ವಿಳಾಸ ಹಾಗೂ ಮೊಬೈಲ್ ಸಂಖ್ಯೆಯೊಂದಿಗೆ ಮೇಲ್ ಮಾಡಬೇಕು. upasanapublications2014@gmail.com, ಪ್ರಕಾಶಕಿ 9731978057 ಸಂಪರ್ಕಿಸಿ.

ಶಾಲೆಗೆ ಬಾಂಬ್ ಬೆದರಿಕೆ ಇ ಮೇಲ್ ಸಂದೇಶ

ಬೆಂಗಳೂರು: ರಾಜ್ಯದಲ್ಲಿ ಇತ್ತೀಚೆಗೆ ಹುಸಿ ಬಾಂಬ್ ಬೆದರಿಕೆ ಪ್ರಕರಣಗಳು ಹೆಚ್ಚಾಗುತ್ತಿಗುತ್ತಿದ್ದು, ಇದೀಗ ನಗರದ ಮತ್ತೊಂದು ಶಾಲೆಗೆ ಬಾಂಬ್ ಬೆದರಿಕೆ ಇ-ಮೇಲ್ ಸಂದೇಶ ರವಾನಿಸಲಾಗಿದೆ. ಕಬ್ಬನ್ ಪಾರ್ಕ್ ಠಾಣಾ ವ್ಯಾಪ್ತಿಯಲ್ಲಿರುವ ಬಿಷಪ್ ಕಾಟನ್ ಶಾಲೆಯ ವೆಬ್‌ಸೈಟ್‌ಗೆ ಕಿಡಿಗೇಡಿಗಳಿಂದ ಹುಸಿ ಬಾಂಬ್ ಬೆದರಿಕೆ ಸಂದೇಶ ಬಂದಿದೆ. ಕೂಡಲೇ ಕಬ್ಬನ್ ಪಾರ್ಕ್ ಠಾಣೆಯ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ಬೆಳಗ್ಗೆ ಬಂದಿದ್ದ ಸಂದೇಶವನ್ನು ಆಡಳಿತ ಮಂಡಳಿ ಮಧ್ಯಾಹ್ನ ಗಮನಿಸಿದ್ದಾರೆ. ಬೆದರಿಕೆ ಸಂದೇಶದ ಮಾಹಿತಿ ತಿಳಿದು ಪೊಲೀಸರಿಂದ ಪರಿಶೀಲನೆ ಮಾಡಿದ್ದಾರೆ. ಬಳಿಕ ಹುಸಿ ಬಾಂಬ್ ಬೆದರಿಕೆ ಇ-ಮೇಲ್ ಎಂದು ಪೊಲೀಸರು ತಿಳಿಸಿದ್ದಾರೆ.

ನ.10ಕ್ಕೆ ಸುವರ್ಣ ಸಂಭ್ರಮದ ಮೆರವಣಿಗೆ

ಬೆಂಗಳೂರು: ನವೆಂಬರ್ 10ರಂದು ಕರ್ನಾಟಕ ಸುವರ್ಣ ಸಂಭ್ರಮದ ಭವ್ಯ ಮೆರವಣಿಗೆ ನಡೆಯಲಿದೆ ಎಂದು ಕನ್ನಡ ಡಿಂಡಿಮ ಉತ್ಸವ ಸಮಿತಿ ತಿಳಿಸಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನಾ ಕಾರ್ಯದರ್ಶಿ ಬೆಳುವಾಯಿ ನವೀನ್ ಹೆಗ್ಡೆ, ನ.10ರಂದು ಕರ್ನಾಟಕ ಸುವರ್ಣ ಸಂಭ್ರಮದ ಭವ್ಯ ಮೆರವಣಿಗೆ ನಡೆಯಲಿದ್ದು, ಮೈಸೂರು ದಸರ ಮಾದರಿಯಲ್ಲಿ ಐತಿಹಾಸಿಕವಾದ ಭುವನೇಶ್ವರಿಯ ಕನ್ನಡ ತೇರನ್ನು ಎಳೆಯಲ್ಲಿದ್ದೇವೆ. ಸುಮಾರು 150 ಸಂಘ, ಸಂಸ್ಥೆ, ಸಂಘಟನೆಗಳು ಭಾಗವಹಿಸಿ ಸುಮಾರು ಹತ್ತು ಸಾವಿರ ಜನ ಸಮೂಹದೊಂದಿಗೆ ನಾಡ ದೇವತೆಗಳು, ಭಜನಾ ತಂಡಗಳು, ಜಾನಪದ ಮೇಳಗಳು ಮತ್ತು ಸುಮಾರು 50 ಬೆಳ್ಳಿ ರಥಗಳು ಭಾಗವಹಿಸಲಿವೆ. ಇದರೊಂದಿಗೆ ವಿಶೇಷವಾಗಿ ರೈತರು ತಮ್ಮ ಗೋವು, ಎತ್ತುಗಳು, ಎತ್ತಿನ ಗಾಡಿಗಳೊಂದಿಗೆ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸಂತೋಷ್ ಗುರೂಜಿ, ಲಯನ್ ನಾಗರಾಜ, ಶಿವಕುಮಾರ ರೆಡ್ಡಿ, ಮಂಜೇಗೌಡ, ತಾಲ್ನಾಡು ರಾಘವೇಂದ್ರ ಇದ್ದರು.

ಕಚೇರಿ ಆವರಣದಲ್ಲಿ ಸಿಗರೇಟ್ ನಿಷೇಧ

ಬೆಂಗಳೂರು: ಸರಕಾರಿ ಕಚೇರಿಗಳಲ್ಲಿ ಹಾಗೂ ಕಚೇರಿ ಆವರಣಗಳಲ್ಲಿ ಧೂಮಪಾನ, ತಂಬಾಕು ಉತ್ಪನ್ನಗಳ ಸೇವನೆಯನ್ನು ನಿಷೇಧಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಈ ಕುರಿತು ರಾಜ್ಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾ ಖೆಯ ಸರಕಾರದ ಅಧೀನ ಕಾರ್ಯ ದರ್ಶಿ ಗೆಜೆಟ್ ಅಧಿಸೂಚನೆ ಹೊರಡಿ ಸಿದ್ದಾರೆ. ಧೂಮಪಾನ ಹಾಗೂ ತಂಬಾಕಿನ ಇತರ ಉತ್ಪನ್ನಗಳ ಸೇವನೆಯು ಆರೋಗ್ಯಕ್ಕೆ ಮಾರಕ ವಾಗಿದ್ದು, ಸಾರ್ವಜನಿಕ ಪ್ರದೇಶ ಗಳಲ್ಲಿ ಇಂತಹ ಉತ್ಪನ್ನಗಳ ಸೇವನೆ ಯನ್ನು ಸಂಪೂರ್ಣವಾಗಿ ನಿಷೇ ಧಿಸಲಾಗಿದೆ. ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ-31ರಲ್ಲಿ ಸಾರ್ವ ಜನಿಕ ಸ್ಥಳದಲ್ಲಿ ಯಾವುದೇ ಮಾದಕ ಪಾನೀಯ ಅಥವಾ ಮಾದಕ ವಸ್ತುವನ್ನು ಸೇವಿಸುವು ದನ್ನು ಕೂಡ ನಿಷೇಧಿಸಲಾಗಿದೆ. ಶಾಸನಾತ್ಮಕ ಎಚ್ಚರಿಕೆಗಳ ಹೊರತಾಗಿಯೂ ಸರಕಾರಿ ಕಚೇರಿಗಳಲ್ಲಿ ಹಾಗೂ ಕಚೇರಿಯ ಆವರಣದಲ್ಲಿ ತಂಬಾಕು ಉತ್ಪನ್ನಗಳ ಸೇವನೆ ಆಗುತ್ತಿರುವುದು ಸರಕಾರದ ಗಮನಕ್ಕೆ ಬಂದಿರುತ್ತದೆ. ಈ ಹಿನ್ನಲೆಯಲ್ಲಿ ಸಿಬ್ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಹಾಗೂ ಪರೋಕ್ಷ ಧೂಮಪಾನದಿಂದ ಸಾರ್ವಜನಿಕರನ್ನು ಹಾಗೂ ಸರಕಾರಿ ಸಿಬ್ಬಂದಿಗಳನ್ನು ರಕ್ಷಿಸುವ ಉದ್ದೇಶದಿಂದ, ಯಾವುದೇ ತಂಬಾಕು ಉತ್ಪನ್ನಗಳ ಸೇವನೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸ ಲಾಗಿದೆ. ಈ ಸಂಬಂಧ ಎಚ್ಚರಿಕೆಯ ಫಲಕವನ್ನು ಕಚೇರಿಯ ಸೂಕ್ತ ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು ಎಂದು ಸೂಚನೆ ನೀಡಿದೆ.

ಮಾನನಷ್ಟ ಮೊಕದ್ದಮೆ; ಮೇಲ್ಮನವಿ ವಾಪಸ್ ಪಡೆದ ಐಪಿಎಸ್ ಅಧಿಕಾರಿ

ರೋಹಿಣಿ ಸಿಂಧೂರಿ ವಿರುದ್ಧ ಸುಪ್ರೀಂ ಮೆಟ್ಟಿಲೇರಿದ್ದ ಡಿ.ರೂಪಾಗೆ ಹಿನ್ನಡೆ

ಸರ್ವೋಚ್ಚ ನ್ಯಾಯಾಲಯದ ವಜಾ ಎಚ್ಚರಿಕೆಗೆ ಮಣಿದು ಅರ್ಜಿ ಹಿಂತೆಗೆತ

ದೆಹಲಿ: ಐಎಎಸ್ ರೋಹಿಣಿ ಸಿಂಧೂರಿ ಸಲ್ಲಿಸಿರುವ ಮಾನನಷ್ಟ ಮೊಕದ್ದಮೆ ರದ್ದು ಕೋರಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದ ಐಪಿಎಸ್ ಡಿ.ರೂಪಾ ಮೌದ್ಗಿಲ್ ತಮ್ಮ ಅರ್ಜಿಯನ್ನು ವಾಪಸ್ ಪಡೆದಿದ್ದಾರೆ. ಅರ್ಜಿ ವಾಪಸ್ ಪಡೆಯದಿದ್ದರೆ ವಜಾ ಮಾಡುವುದಾಗಿ ಕೋರ್ಟ್ ಎಚ್ಚರಿಕೆ ನೀಡಿದ ಬಳಿಕ ಅರ್ಜಿ ವಾಪಸ್ ಪಡೆದಿದ್ದಾರೆ.

ರೋಹಿಣಿ ಸಿಂಧೂರಿ ಸಲ್ಲಿಸಿದ್ದ ಅರ್ಜಿ ವಜಾ ಮಾಡಲು ಹೈಕೋರ್ಟ್ ನಿರಾಕರಿಸಿದ ಹಿನ್ನೆಲೆ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಡಿ.ರೂಪಾ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ನ್ಯಾ. ಎ.ಎಸ್ ಓಕಾ ನೇತೃತ್ವದ ದ್ವಿ ಸದಸ್ಯ ಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಡಿ.ರೂಪಾ ಪರ ವಕೀಲರು ಮಧ್ಯವರ್ತಿಗಳ ಮಧ್ಯಸ್ಥಿಕೆಯಲ್ಲಿ ಪರಸ್ಪರ ಕ್ಷಮೆಯಾಚನೆಗೆ ಮನವಿ ಮಾಡಿದರು. ಇದಕ್ಕೆ ಒಪ್ಪದ ರೋಹಣಿ ಸಿಂಧೂರಿ ಪರ ವಕೀಲರು, ಅವರಿಂದ ತಪ್ಪಾಗಿದೆ, ಹೀಗಾಗಿ ಡಿ.ರೂಪಾ ಬೇಷರತ್ ಕ್ಷಮೆಯಾಚಿಸಿದರೆ ಮಾನನಷ್ಟ ಮೊಕದ್ದಮೆಯ ಅರ್ಜಿ ವಾಪಸ್ ಪಡೆಯುವುದಾಗಿ ವಾದಿಸಿದರು.

ರಾಜೀ ಸಂಧಾನಕ್ಕೆ ಸೂಚನೆ: ಈ ವೇಳೆ ಮಧ್ಯಪ್ರವೇಶ ಮಾಡಿದ ನ್ಯಾಯಧೀಶರು, ಇಬ್ಬರು ಕೋರ್ಟ್‌ನಲ್ಲಿದ್ದೀರಿ. ಪರಸ್ಪರ ಮಾತನಾಡಿಕೊಳ್ಳಬಹುದೇ ಅಥವಾ ಹಿರಿಯ ವಕೀಲರು ಅಥವಾ ನಿವೃತ್ತ ನ್ಯಾಯಾಧೀಶರ ಸಮ್ಮುಖದಲ್ಲಿ ಪರಸ್ಪರ ರಾಜೀ ಸಂಧಾನ ಮಾಡಬಹುದೇ ಎಂದು ಪ್ರಸ್ತಾಪ ಮಾಡಿತು. ಕೆಲ ಕಾಲ ಮಾತುಕತೆಗೂ ಅವಕಾಶ ನೀಡಿ ವಿಚಾರಣೆ ಮುಂದೂಡಿತು. ಕೆಲಹೊತ್ತಿನ ಬಳಿಕ ಡಿ.ರೂಪಾ ಮಾತುಕತೆ ವಿಫಲವಾಯಿತು ಎಂದರು. ಇದಕ್ಕೆ ಕಾರಣ ಏನು ಎಂದು ನ್ಯಾಯಧೀಶರು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ರೂಪಾ ನಾನು ಬೇಷರತ್ ಕ್ಷಮೆಯಾಚಿಸುವಂತೆ ಒತ್ತಾಯಿಸಿದ್ದಾರೆ ಎಂದು ಹೇಳಿದರು. ಇದಕ್ಕೆ ಉತ್ತರಿಸಿದ ರೋಹಿಣಿ ಸಿಂಧೂರಿ, ಡಿ.ರೂಪಾ ನನ್ನ ಮೇಲೆ ಮಾಡಿದ ಆರೋಪಗಳು ಇನ್ನೂ ಸಾಮಾಜಿಕ ಜಾಲತಾಣದಲ್ಲಿದೆ. ಕೋರ್ಟ್ ಆದೇಶದ ಬಳಿಕವೂ ರೂಪಾ ಡಿಲೀಟ್ ಮಾಡಿಲ್ಲ ಎಂದು ಕೋರ್ಟ್ ಗಮನಕ್ಕೆ ತಂದರು.

ಅಧಿಕಾರಿಗಳ ವರ್ತನೆಗೆ ಕೋರ್ಟ್ ತರಾಟೆ

ಇಬ್ಬರು ಹಿರಿಯ ಅಧಿಕಾರಿಗಳು ಹೀಗೆ ವರ್ತಿಸಬಾರದು. ಮಾತುಕತೆಗೆ ಒಪ್ಪದಿದ್ದರೆ ನಾವು ಏನು ಮಾಡಬಹುದು. ಅರ್ಹತೆ ಮೇಲೆ ವಿಚಾರಣೆ ನಡೆಸಬಹುದು ಎಂದು ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿತು. ಅಂತಿಮವಾಗಿ ಇಬ್ಬರೂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂ ವಿಚಾರಣಾಧೀನ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳುವಂತೆ ಸೂಚನೆ ನೀಡಿತು. ಸುಪ್ರೀಂಕೋರ್ಟ್ ಸೂಚನೆ ಹಿನ್ನೆಲೆಯಲ್ಲಿ ಡಿ.ರೂಪಾ ತಮ್ಮ ಅರ್ಜಿ ವಾಪಸ್ ಪಡೆದರು.

ಏನಿದು ಪ್ರಕರಣ: ನನ್ನ ವಿರುದ್ಧ ಡಿ.ರೂಪಾ ಮೌದ್ಗಿಲ್ 2023ರ ಫೆ.18 ಮತ್ತು 19ರಂದು ತಮ್ಮ ಫೇಸ್ಬುಕ್ ಖಾತೆಯಲ್ಲಿ ಕೀಳು ಅಭಿರುಚಿಯಿಂದ ಕೂಡಿದ ಆರೋಪ ಮಾಡಿದ್ದಾರೆ. ವಿದ್ಯುನ್ಮಾನ ಮಾಧ್ಯಮಗಳಲ್ಲೂ ಹೇಳಿಕೆ ನೀಡಿದ್ದಾರೆ. ಆ ಆರೋಪಗಳು ನನ್ನ ವ್ಯಕ್ತಿತ್ವಕ್ಕೆ ಧಕ್ಕೆ ಉಂಟುಮಾಡುವಂತಿವೆ. ನನ್ನ ತೇಜೋವಧೆ ಮಾಡುವ ದುರದ್ದೇಶದಿಂದಲೇ ರೂಪ ಈ ಕೃತ್ಯ ಎಸಗಲಾಗಿದೆ. ಇದು ನನ್ನ ಖಾಸಗಿ, ಸಾಮಾಜಿಕ ಮತ್ತು ವೃತ್ತಿ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿದ್ದು, ಮಾನಸಿಕ ಯಾತನೆ ಉಂಟು ಮಾಡಿದೆ ಎಂದು ಆರೋಪಿಸಿ ರೋಹಿಣಿ ಸಿಂಧೂರಿ ಮಾ.3ರಂದು ವಿಚಾರಣಾ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಮಾನಹಾನಿ ಮತ್ತು ಮಾನಸಿಕ ಯಾತನೆ ಉಂಟು ಮಾಡಿರುವುದಕ್ಕಾಗಿ ಡಿ.ರೂಪಾ ಅವರಿಂದ ನನಗೆ 1 ಕೋಟಿ ರು. ಮೊತ್ತ ಪರಿಹಾರವಾಗಿ ಕೊಡಿಸಿಬೇಕು. ಅವರ ವಿರುದ್ಧ ಸೂಕ್ತ ದಂಡನೀಯ ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದರು. ದೂರು ಪರಿಗಣಿಸಿದ್ದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ರೂಪಾ ವಿರುದ್ಧ ಕ್ರಿಮಿನಲ್ ಮಾನನಷ್ಟ ಪ್ರಕರಣ ದಾಖಲಿಸಲು ಮಾ.24ರಂದು ಆದೇಶಿಸಿತ್ತು. ಈ ಆದೇಶ ಮತ್ತು ಖಾಸಗಿ ದೂರನ್ನು ರದ್ದುಪಡಿಸಬೇಕು ಎಂದು ಕೋರಿ ರೂಪಾ 2023ರ ಮೇ.31ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು. ಅವರ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿತ್ತು.

ಬೆನ್ನುನೋವಿನ ಚಿಕಿತ್ಸೆಗೆ ಜಾಮೀನು

ದರ್ಶನ್ ಜಾಮೀನು ಪ್ರಶ್ನಿಸಿ ಸುಪ್ರೀಂ ಮೆಟ್ಟಿಲೇರಲು ಸಿದ್ಧತೆ

ಬೆಂಗಳೂರು: ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ದರ್ಶನ್ ಸದ್ಯ ಬೆನ್ನುನೋವಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೈಕೋರ್ಟ್ ಸೂಚನೆಯಂತೆ ದರ್ಶನ್ ಚಿಕಿತ್ಸಾ ವರದಿ ಹೈಕೋರ್ಟ್‌ಗೆ ಸಲ್ಲಿಕೆಯಾಗಿದೆ. ಮತ್ತೊಂದೆಡೆ ಪೊಲೀಸರು ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಲು ಸಜ್ಜಾಗಿದ್ದಾರೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲುಪಾಲಾಗಿದ್ದ ದರ್ಶನ್‌ಗೆ ಅನಾರೋಗ್ಯ ಹಿನ್ನೆಲೆ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದೆ. ಕೆಲ ಷರತ್ತುಗಳನ್ನು ವಿಧಿಸಿ ಜಾಮೀನು ನೀಡಲಾಗಿತ್ತು. ಷರತ್ತಿನ ಅನ್ವಯ ಇವತ್ತು ದರ್ಶನ್ ಚಿಕಿತ್ಸಾ ವರದಿ ಕೋರ್ಟ್‌ಗೆ ಸಲ್ಲಿಕೆಯಾಗಿದೆ. ದರ್ಶನ್ ಪರ ವಕೀಲರು ಬಿಜಿಎಸ್ ವೈದ್ಯರು ನೀಡಿರುವ ವರದಿಯನ್ನು ಕೋರ್ಟ್‌ಗೆ ಸಲ್ಲಿಸಿದ್ದಾರೆ. ಆದರೆ, ಸರಕಾರದ ಪರ ವಕೀಲರಿಗೆ ವರದಿ ಪ್ರತಿ ನೀಡಿಲ್ಲ.

ಗೃಹ ಇಲಾಖೆ ಅನುಮತಿ ನಂತರ ಅರ್ಜಿ: ಮಧ್ಯಂತರ ಆದೇಶ ನೀಡಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಪೊಲೀಸರು ಸುಪ್ರೀಂಕೋರ್ಟ್ ಮೆಟ್ಟಿಲೇರಲು ಸಿದ್ಧತೆ ನಡೆಸಿದ್ದಾರೆ. ರಾಜ್ಯ ಗೃಹ ಇಲಾಖೆ ಒಪ್ಪಿಗೆ ಪಡೆದುಕೊಂಡು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲು ಚಿಂತನೆ ನಡೆಸಿದ್ದಾರೆ. ಶಸ್ತ್ರಚಿಕಿತ್ಸೆ ನೆಪದಿಂದ ದರ್ಶನ್ ಮಧ್ಯಂತರ ಜಾಮೀನು ಪಡೆದಿದ್ದಾರೆ. ಆದರೆ, ಸದ್ಯಕ್ಕೆ ಆರೋಪಿ ದರ್ಶನ್‌ಗೆ ಶಸ್ತ್ರಚಿಕಿತ್ಸೆ ಅವಶ್ಯಕತೆ ಇಲ್ಲ ಎಂದಾದರೆ ಇದನ್ನೇ ಅಧಾರವಾಗಿಟ್ಟುಕೊಂಡು ಸುಪ್ರೀಂಕೋರ್ಟ್ ಮೆಟ್ಟಿಲೇರಲು ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದಾರೆ.

ವರದಿಯಲ್ಲಿ ಏನಿದೆ?: ದರ್ಶನ್ ಆಪರೇಷನ್ ಬಗ್ಗೆ ಇನ್ನೂ ನಿರ್ಧಾರ ಆಗಿಲ್ಲ. ದರ್ಶನ್‌ರ ಎಲ್5 ಎಸ್1ಗೆ ಫಿಸಿಯೋ ಥೆರಫಿ ನೀಡಲಾಗುತ್ತಿದೆ. ಆಸ್ಪತ್ರೆಯಲ್ಲಿ ದಾಖಲಿಸಿಕೊಂಡು ಸಾಂಪ್ರದಾಯಿಕ ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ಫಿಸಿಯೋಥೆರಫಿ ಮಾಡಲಾಗುತ್ತಿದೆ, ಆದರೆ, ಈ ಚಿಕಿತ್ಸೆಯೇ ದರ್ಶನ್‌ಗೆ ಅಂತಿಮ ಅಲ್ಲ. ಸರ್ಜರಿಯ ವಿಧಾನದ ಬಗ್ಗೆ ಸಂಪೂರ್ಣ ವಿವರಣೆ ನೀಡಲಾಗಿದೆ. ಅವರು ಒಪ್ಪಿದ ಬಳಿಕ ಚಿಕಿತ್ಸೆಯ ಬಗ್ಗೆ ನಿರ್ಧಾರ ಮಾಡಲಾಗುತ್ತದೆ. ಆತ ಒಪ್ಪಿದ ಬಳಿಕ ಚಿಕಿತ್ಸೆ ಪ್ಲಾನ್ ಆಫ್ ಆ್ಯಕ್ಷನ್ ಮಾಡಲಾಗುತ್ತದೆ.

ಕಮರ್ಷಿಯಲ್ ಸ್ಟ್ರೀಟ್ ಒಳಗೆ ಆಟೋ, ಸರಕು ವಾಹನಗಳ ಪ್ರವೇಶ ನಿಷೇಧ

ಬೆಂಗಳೂರು: ಬೆಂಗಳೂರಿನ ಶಾಪಿಂಗ್ ಪ್ರಿಯರ ನೆಚ್ಚಿನ ರಸ್ತೆಯಾಗಿರುವ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಇನ್ನುಮುಂದೆ ಆಟೋ ಹಾಗೂ ಸರಕು ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಸಂಚಾರಿ ಪೊಲೀಸರು ಆದೇಶ ಹೊರಡಿಸಿದ್ದಾರೆ.



ಶಿವಾಜಿನಗರ ಸಂಚಾರಿ ಪೊಲೀಸರು ಕಮರ್ಷಿಯಲ್ ಸ್ಟ್ರೀಟ್‌ನ ಪ್ರವೇಶದ್ವಾರಗಳಲ್ಲಿ ಬ್ಯಾರಿಕೇಡ್ ಹಾಕಿ ಬ್ಯಾನರ್‌ಗಳನ್ನುಅಳವಡಿಸಿದ್ದು, ಆಟೋ ಹಾಗೂ ಸರಕು ವಾಹನಗಳಿಗೆ ಪ್ರವೇಶವನ್ನು ನಿಷೇಧಿಸಿದೆ. ಕಮರ್ಷಿಯಲ್ ಸ್ಟ್ರೀಟ್‌ಗೆ ಆಗಮಿಸುವ ಆಟೋ ಹಾಗೂ ಸರಕು ವಾಹನಗಳಿಂದಾಗಿ ಇಲ್ಲಿಗೆ ಆಗಮಿಸುವ ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿದ್ದು, ಸಂಚಾರ ದಟ್ಟಣೆಯಿಂದಾಗಿ ಸಾರ್ವಜನಿಕರು ಸಂಚರಿಸದ ಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆ ಸಂಚಾರಿ ಪೊಲೀಸರು ಈ ಕ್ರಮಕ್ಕೆ ಮುಂದಾಗಿದ್ದು, ಬ್ಯಾರಿಕೇಡ್ ಹಾಕಿ ಆಟೋ ಹಾಗೂ ಸರಕುಸಾಗಣೆ ವಾಹನಗಳನ್ನು ನಿರ್ಬಂಧಿಸಿದ್ದಾರೆ.

ವಾರಾಂತ್ಯಗಳಲ್ಲಿ ದೇಶ, ವಿದೇಶಗಳಿಂದ ಜನರು ಆಗಮಿಸುತ್ತಿದ್ದು, ಈ ವೇಳೆ ಕಮರ್ಷಿಯಲ್ ಸ್ಟ್ರೀಟ್‌ಗೆ ಆಗಮಿಸುವ ಸರಕು ವಾಹನ ಹಾಗೂ ಆಟೋಗಳಿಂದ ಅನಗತ್ಯ ಸಮಸ್ಯೆ ಗಳುಂಟಾಗುತ್ತಿವೆ. ಸಂಚಾರ ದಟ್ಟಣೆಯಿಂದಾಗಿ ಸಾರ್ವಜನಿಕರು ಆಗಮಿಸದ ಸ್ಥಿತಿ ನಿರ್ಮಾಣ ವಾದ ಬೆನ್ನಲ್ಲೇ ವಾಹನಗಳ ಪ್ರವೇಶಕ್ಕೆ ನಿರ್ಬಂಧ ಹೇರಿ ಸಾರ್ವಜನಿಕರ ಓಡಾಟಕ್ಕೆ ಅವಕಾಶ ಮಾಡಿಕೊಡಲಾಗಿದೆ. ನಿಷೇಧದ ಬಳಿಕವೂ ಆಟೋ ಮತ್ತು ಸರಕು ವಾಹನಗಳು ಹೋದರೆ ನೋ ಎಂಟ್ರಿ ಕೇಸ್ ಹಾಕಿ 500 ರು. ದಂಡ ಹಾಕಲು ಪೊಲೀಸರು ನಿರ್ಧರಿಸಿದ್ದಾರೆ.

ಉಪಚುನಾವಣೆ ಖರ್ಚಿಗೆ ₹50 ಕೋಟಿ ಬೇಡಿಕೆ ಆರೋಪ: ಆತುರದ ಕ್ರಮ ಬೇಡ

ಎಚ್‌ಡಿ ಕುಮಾರಸ್ವಾಮಿ ಪ್ರಕರಣ: ಪೊಲೀಸರಿಗೆ ಹೈಕೋರ್ಟ್‌ನಿಂದ ಸೂಚನೆ

ಬೆಂಗಳೂರು: ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಯ ಖರ್ಚಿಗೆ 50 ಕೋಟಿ ರುಪಾಯಿ ಬೇಡಿಕೆ ಇಟ್ಟು ಬೆದರಿಕೆ ಹಾಕಿರುವ ಆರೋಪದ ಪ್ರಕರಣದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಯಾವುದೇ ಬಲವಂತದ ಕ್ರಮಕೈಗೊಳ್ಳದಂತೆ ಪೊಲೀಸರಿಗೆ ಹೈಕೋರ್ಟ್ ಗುರುವಾರ ಮಧ್ಯಂತರ ಆದೇಶ ಮಾಡಿದೆ.

ರಿಯಲ್ ಎಸ್ಟೇಟ್ ಉದ್ಯಮಿ ಮತ್ತು ಜೆಡಿಎಸ್ ಮಾಜಿ ಮುಖಂಡ ವಿಜಯ್ ಟಾಟಾ ದೂರಿನ ಮೇರೆಗೆ ಅಮೃತಹಳ್ಳಿ ಠಾಣೆಯಲ್ಲಿ ದಾಖಲಾಗಿರುವ ಎಫ್ ಐಆರ್ ರದ್ದುಗೊಳಿಸುವಂತೆ ಕೋರಿ ಎಚ್.ಡಿ. ಕುಮಾರಸ್ವಾಮಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಬಲವಂತದ ಕ್ರಮ ಕೈಗೊಳ್ಳದಂತೆ ಆದೇಶ: ಅರ್ಜಿದಾರರ ಪರ ವಕೀಲ ಎ ವಿ ನಿಶಾಂತ್ ಅವರು ಇದೇ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ಜೆಡಿಎಸ್ ನಗರದ ಘಟಕದ ಅಧ್ಯಕ್ಷ ರಮೇಶ್ ಗೌಡ ವಿರುದ್ಧ ಯಾವುದೇ ಬಲವಂತ ಕ್ರಮಕೈಗೊಳ್ಳದಂತೆ ಆದೇಶ ಮಾಡಲಾಗಿದೆ ಎಂದು ಪೀಠದ ಗಮನಕ್ಕೆ ತಂದರು. ಇದನ್ನು ಆಲಿಸಿದ ಪೀಠವು ಇಲ್ಲಿಯೂ ಯಾವುದೇ ಬಲವಂತದ ಕ್ರಮಕೈಗೊಳ್ಳಬಾರದು ಎಂಬ ಆದೇಶ ಅನ್ವಯಿಸಲಿದೆ ಎಂದು ವಿಚಾರಣೆಯನ್ನು ನವೆಂಬರ್ 29ಕ್ಕೆ ಮುಂದೂಡಿತು.

ಅಕ್ಟೋಬರ್ 23ರಂದು ರಮೇಶ್‌ಗೌಡ ಅರ್ಜಿ ವಿಚಾರಣೆ ನಡೆಸಿದ್ದ ಪೀಠವು, ಅಮೃತಹಳ್ಳಿ ಠಾಣಾಧಿಕಾರಿ ಕುಮಾರಸ್ವಾಮಿ ಅವರು 50 ಕೋಟಿ ರುಪಾಯಿ ಬೇಡಿಕೆ ಇಟ್ಟಿದ್ದಾರೆ ಎಂಬ ದೂರಿಗೆ ಸಂಬಂಧಿಸಿದಂತೆ ಮೊದಲಿಗೆ ಎನ್‌ಸಿಆರ್ ದಾಖಲಿಸಿ, ಆನಂತರ ಎಫ್‌ಐಆರ್ ಮಾಡಿರುವುದು ಏಕೆ ಎಂಬುದಕ್ಕೆ ಮುಂದಿನ ವಿಚಾರಣೆ ವೇಳೆಗೆ ವಿವರಣೆ ಸಲ್ಲಿಸಬೇಕು.ಅಲ್ಲಿಯವರೆಗೆ ಅರ್ಜಿದಾರರ ವಿರುದ್ಧ ಯಾವುದೇ ದುರುದ್ದೇಶಪೂರಿತ ಕ್ರಮಕೈಗೊಳ್ಳಬಾರದು ಎಂದು ಆದೇಶಿಸಿತ್ತು. ವಿಜಯ್ ಟಾಟಾ ದೂರು ಆಧರಿಸಿ ಅ.3ರಂದು ರಮೇಶ್ ಗೌಡ ಮತ್ತು ಕುಮಾರಸ್ವಾಮಿ ವಿರುದ್ಧ ಭಾರತೀಯ ನ್ಯಾಯಸಂಹಿತೆ ಸೆಕ್ಷನ್‌ಗಳಾದ 308(2), 351(2), 3(5) ಅಡಿ ಪ್ರಕರಣ ದಾಖಲಿಸಲಾಗಿದೆ.

ಮದ್ಯಪಾನ ಮಾಡಿ ವೈದ್ಯರಿಂದ ಚುಚ್ಚುಮದ್ದು: ಪ್ರಕರಣ ದಾಖಲು

ಬೆಂಗಳೂರು: ಕುಡಿದ ಮತ್ತಿನಲ್ಲಿ ವೈದ್ಯರು ಮಹಿಳಾ ರೋಗಿಗೆ ನಾಲ್ಕಕ್ಕಿಂತ ಹೆಚ್ಚು ಇಂಜೆಕ್ಷನ್ ನೀಡಿ ಅಸಭ್ಯವಾಗಿ ಮಾತನಾಡಿರುವ ಆರೋಪ ಕೇಳಿ ಬಂದಿದ್ದು, ಈ ಸಂಬಂಧ ಕುಮಾರಸ್ವಾಮಿ ಪೊಲೀಸ್ ಠಾಣೆಯಲ್ಲಿ ಎನ್‌ಸಿಆರ್ ದಾಖಲಾಗಿದೆ. ಉತ್ತರಹಳ್ಳಿ ಮಾರುತಿ ನಗರದ ಸ್ನೇಹಾ ಭಟ್ ನೀಡಿದ ದೂರಿನ ಮೇರೆಗೆ ಪ್ರಗತಿ ಮಲ್ಟಿ ಹಾಸ್ಪಿಟಲ್ ವೈದ್ಯ ಪ್ರದೀಪ್, ನರ್ಸ್ ಮಹೇಶ್ ಎಂಬುವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಹುಷಾರಿಲ್ಲದ ಕಾರಣ ಬುಧವಾರ ಸಂಜೆ ಸ್ನೇಹಾ ಭಟ್ ಆಸ್ಪತ್ರೆಗೆ ತೆರಳಿದ್ದರು. ಪಾಳಿಯಲ್ಲಿ ಇಲ್ಲದಿದ್ದರೂ ವೈದ್ಯ ಪ್ರದೀಪ್ ಚಿಕಿತ್ಸೆ ನೀಡಲು ಮುಂದಾಗಿದ್ದರು. ಪಾನಮತ್ತರಾಗಿದ್ದ ವೈದ್ಯರು ಏಕಾಏಕಿ ನಾಲ್ಕಕ್ಕಿಂತ ಹೆಚ್ಚು ಇಂಜೆಕ್ಷನ್ ನೀಡಿದ್ದಾರೆ. ಕರ್ತವ್ಯ ಮುಗಿದ ಬಳಿಕ ಮದ್ಯಪಾನ ಮಾಡಿ ಚಿಕಿತ್ಸೆ ನೀಡಿದ್ದಾರೆ. ಇದನ್ನ ಪ್ರಶ್ನಿಸಿದಾಗ ಅಸಭ್ಯವಾಗಿ ಮಾತನಾಡಿದ್ದಾರೆ ಎಂದು ದೂರಿನಲ್ಲಿ ಸ್ನೇಹಾ ಭಟ್ ಉಲ್ಲೇಖಿಸಿದ್ದಾರೆ. ಘಟನೆ ಸಂಬಂಧ ದಕ್ಷಿಣ ವಿಭಾಗದ ಡಿಸಿಪಿ ಲೊಕೇಶ್ ಜಗಲಾಸರ್, ಮದ್ಯಪಾನ ಮಾಡಿ ಮಹಿಳೆಗೆ ಚುಚ್ಚುಮದ್ದು ನೀಡಿದ ಆರೋಪದಡಿ ಎನ್‌ಸಿಆರ್ ದಾಖಲಿಸಿಕೊಳ್ಳಲಾಗಿದೆ. ವೈದ್ಯರ ಮೇಲಿನ ಆರೋಪಕ್ಕೆ ಕುರಿತಂತೆ ವೈದ್ಯಕೀಯ ಮಂಡಳಿಗೆ ಪತ್ರ ಬರೆಯಲಾಗುವುದು. ವರದಿ ಬಂದ ಬಳಿಕ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

ಸೈಲ್ ಸೇರಿ ದೋಷಿಗಳಿಂದ ಹೈಕೋರ್ಟ್‌ಗೆ ಮೇಲ್ಮನವಿ

ಬೇಲೆಕೇರಿ ಅದಿರು ಕಳವು: ಶಾಸಕ ಸತೀಶ್ ಸೈಲ್, ಮೂವರು ಉದ್ಯಮಿಗಳಿಂದ ಶಿಕ್ಷೆ ರದ್ದತಿಗೆ ಮನವಿ, ಸಿಬಿಐಗೆ ನೋಟಿಸ್

ಬೆಂಗಳೂರು: ಬೇಲೆಕೇರಿ ಬಂದರಿನಿಂದ ಅಕ್ರಮವಾಗಿ ಅದಿರು ಸಾಗಣೆ ಮತ್ತು ಮಾರಾಟಕ್ಕೆ ಸಂಬಂಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಶಿಕ್ಷೆ ಮತ್ತು ದಂಡದ ತೀರ್ಪನ್ನು ಬದಿಗೆ ಸರಿಸುವಂತೆ ಕೋರಿ ಕಾಂಗ್ರೆಸ್ ಶಾಸಕ ಸತೀಶ್ ಸೈಲ್, ಉದ್ಯಮಿಗಳಾದ ಸ್ವಸ್ತಿಕ್ ನಾಗರಾಜ್, ಗೋವಿಂದರಾಜ್ ಮತ್ತು ಚೇತನ್ ಶಾ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ಗುರುವಾರ ಕೇಂದ್ರೀಯ ತನಿಖಾ ದಳಕ್ಕೆ ನೋಟಿಸ್ ಜಾರಿ ಮಾಡಿದೆ.

ಮೆಸರ್ಸ್ ಮಲ್ಲಿಕಾರ್ಜುನ್ ಶಿಪ್ಪಿಂಗ್ ಪ್ರೈ. ಲಿಮಿಟೆಡ್ ಮತ್ತು ಅದರ ಮಾಲೀಕ ಸತೀಶ್ ಸೈಲ್ ಪ್ರತ್ಯೇಕವಾಗಿ ಸಲ್ಲಿಸಿದ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ವಿಚಾರಣೆ ನಡೆಸಿತು.

ನ.14ಕ್ಕೆ ವಿಚಾರಣೆ ನಡೆಸಿ: ಸಿಬಿಐ ಪ್ರತಿನಿಧಿಸಿದ್ದ ವಿಶೇಷ ಸರಕಾರಿ ಅಭಿಯೋಜಕ ಪಿ.ಪ್ರಸನ್ನ ಕುಮಾರ್ ಅವರು, ಒಟ್ಟು 10 ಅರ್ಜಿಗಳು ಸಲ್ಲಿಕೆಯಾಗಿವೆ. ನವೆಂಬರ್ 12ರ ಬದಲಿಗೆ ಎಲ್ಲಾ ಅರ್ಜಿಗಳ ವಿಚಾರಣೆ 14ಕ್ಕೆ ನಡೆಸಬೇಕು. ಸಿಆರ್‌ಪಿಸಿ ಸೆಕ್ಷನ್ 389 ಶಿಕ್ಷೆಯನ್ನು ಸ್ವಯಂಚಾಲಿತವಾಗಿ ಅಮಾನತ್ತಿನಲ್ಲಿಡಬೇಕು ಎಂದು ಹೇಳುವುದಿಲ್ಲ. ನಾಗೇಶ್ ಸಾಹೇಬರು ಬಳ್ಳಾರಿ, ಸಂಡೂರಿಗೆ ಹೋಗಿಲ್ಲ. ಅಲ್ಲಿಗೆ ಹೋದರೆ ಏನಾಗಿದೆ ಎಂಬುದು ತಿಳಿಯುತ್ತದೆ ಎಂದರು.

ನೋಟಿಸ್ ನೀಡಬೇಕಿಲ್ಲ: ಅರ್ಜಿದಾರರ ಪರವಾಗಿ ವಾದಿಸಿದ ಹಿರಿಯ ವಕೀಲ ಸಿ.ವಿ.ನಾಗೇಶ್, ಸಿಆರ್‌ಪಿಸಿ ಸೆಕ್ಷನ್ 389 ಅಡಿ ಶಿಕ್ಷೆಯು ಹತ್ತು ವರ್ಷ ಅಥವಾ ಜೀವಾವಧಿ ಇಲ್ಲದ ಸಂದರ್ಭದಲ್ಲಿ ವಿಶೇಷ ಸರಕಾರಿ ಅಭಿಯೋಜಕರಿಗೆ ನೋಟಿಸ್ ನೀಡಲೇಬೇಕಿಲ್ಲ. ಅವರು ಆಕ್ಷೇಪಣೆ ಸಲ್ಲಿಸುವುದೇ ಬೇಕಿಲ್ಲ. ಹೀಗಿರುವಾಗ, ಸಿಬಿಐ ವಕೀಲರು ಆಕ್ಷೇಪಣೆ ಸಲ್ಲಿಸಲು ಸಮಯ ಕೇಳುವ ಪ್ರಶ್ನೆ ಎಲ್ಲಿ ಉದ್ಭವಿಸುತ್ತದೆ..? ಅಂತಿಮವಾಗಿ ನ್ಯಾಯಾಲಯದ ಆದೇಶಕ್ಕೆ ತಲೆಬಾಗುತ್ತೇವೆ. ಮೇಲ್ಮನವಿ ಸಲ್ಲಿಸಿದಾಗ ವಿಚಾರಣಾಧೀನ ನ್ಯಾಯಾಲಯದ ಶಿಕ್ಷೆ ಸ್ವಯಂಚಾಲಿತವಾಗಿ ಅಮಾನತಾಗುತ್ತದೆ. ಗರಿಷ್ಠ ಶಿಕ್ಷೆ ಮೂರು ವರ್ಷ ಮಾತ್ರ ಇದೆ. ಇದಕ್ಕೆ ಮ್ಯಾಜಿಸ್ಟ್ರೇಟ್, ಸತ್ರ ನ್ಯಾಯಾಲಯದಲ್ಲಿ ಜಾಮೀನಾಗುತ್ತದೆ. ಹೀಗಿರುವಾಗ ಹೈಕೋರ್ಟ್‌ನಲ್ಲಿ ಜಾಮೀನು ಮಂಜೂರಾಗುವುದಿಲ್ಲವೇ ಎಂದು ವಾದಿಸಿದರು.

ಯಾರಿಗಾದರೂ ಸೇರಿರಬೇಕು..: ಸಿಆರ್‌ಪಿಸಿ ಸೆಕ್ಷನ್ 212 ಅಡಿ ಆರೋಪ ನಿಗದಿ ಮಾಡುವಾಗ ಐಪಿಸಿ ಸೆಕ್ಷನ್ 420 ಮತ್ತು 379 ಅಡಿ ಮಾತ್ರ ಆರೋಪ ನಿಗದಿ ಮಾಡಲಾಗಿದೆ. ವಿಚಾರಣಾಧೀನ ನ್ಯಾಯಾಧೀಶರು ಐಪಿಸಿ ಸೆಕ್ಷನ್ 420 ಅಡಿಯೂ ಆರೋಪ ನಿಗದಿಗೆ ಅನುಮತಿಸಿದ್ದಾರೆ. ಪ್ರಸಕ್ತ ಪ್ರಕರಣದಲ್ಲಿ ಸೆಕ್ಷನ್ 379 ಅನ್ವಯಿಸಲು, ಆಕ್ಷೇಪಿತ ಕಬ್ಬಿಣದ ಅದಿರಿನ ಮಾಲೀಕತ್ವ ಯಾರಾದರೂ ಹೊಂದಿರಬೇಕು. ಕಾನೂನಾತ್ಮಕವಾಗಿ ಅದು ಯಾರಿಗಾದರೂ ಸೇರಿರಬೇಕು ಎಂದು ವಾದಿಸಿದರು.

ಅಲ್ಲದೆ, ವಿಚಾರಣಾಧೀನ ನ್ಯಾಯಾಲಯದ 400 ಪುಟಗಳ ತೀರ್ಪು ಹೇಗಿದೆ ಎಂದರೆ ಎಡ ಮತ್ತು ಬಲಗಡೆ ಎರಡು ಇಂಚು ಜಾಗ ಬಿಡಲಾಗಿದೆ. ರಿಪೋರ್ಟೆಡ್ ತೀರ್ಪುಗಳ 20 ಪುಟ ತೆಗೆದುಹಾಕಲಾಗಿದೆ ಅಷ್ಟೇ. ತೀರ್ಪೊಂದರ 36 ಪುಟ ಅಡಕಗೊಳಿಸಲಾಗಿದೆ ಎಂದು ವ್ಯಾಖ್ಯಾನಿಸಿದರು. ಅಂತಿಮವಾಗಿ ಪೀಠ ಇದೇ ಪ್ರಕರಣಕ್ಕೆ ಸಂಬಂಧಿಸಿದ ಇತರೆ ಎರಡು ಪ್ರಕರಣ ನವೆಂಬರ್ 13ಕ್ಕೆ ವಿಚಾರಣೆಗೆ ನಿಗದಿಪಡಿಸಲಾಗಿದೆ. ಹೀಗಾಗಿ, ಅಂದು ಎಲ್ಲಾ ಪ್ರಕರಣದಲ್ಲಿ ಆದೇಶ ಮಾಡಲಾಗುವುದು ಎಂದಿದೆ ಎಂದು ಸಿ.ವಿ.ನಾಗೇಶ್ ವಿವರಿಸಿದರು.

BEFORE THE DEBTS RECOVERY TRIBUNAL - I, AT BENGALURU.

S.A. No. 796 of 2022

BETWEEN: 1. Sri. A. JOHN ELANGOVAN. 2. Smt. E. KARPAGAM ... APPLICANTS

AND: M/s. PRAGATHI CO-OPERATIVE BANK LTD ...RESPONDENT

Sri. HARISH. G.V ... PROPOSED RESPONDENT No. 2

To, Sri. HARISH. G.V, aged about 35 years, Son of Sri. Venkateshwara Rao .G., Residing at No. 452, 12th Main, Bhavani Nagar, 2nd Block, (Railway Men's Layout), Mallathahalli, [Near Jayanth Convention Hall], Bengaluru- 560 056.

WHEREAS, the Applicants have filed an Application to implead you as Respondent No. 2 to the proceeding since they are challenging the validity of the auction sale of the Application Schedule property made to you during the pendency of the adjudication of the Application.

The case is now posted to **13/12/2024** for hearing and you are hereby called upon to appear in person or through an Advocate before the Hon'ble Tribunal on **13/12/2024** at **10.30 A.M.** and make your submissions, failing which the case would be heard and determined in your absence.

Given under my hand and the seal of the Court on this 28-10-2024

By order of the Hon'ble Tribunal, Debts Recovery Tribunal-I, Bengaluru

Advocate for the Applicants:
M. D. ALAVANDAR
No. 144 A, 5th Cross, 8th Main
Defence Layout, Sahakara Nagar
Bengaluru- 560 092.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ ಸೌಜನ್ಯ ಸ್ಯಾಮಲ ರವರ ತಮ್ಮ ಮಾಲಿಕತ್ವಕ್ಕೊಳಪಟ್ಟ ಈ ಹಿಂದೆ ಶ್ರೀ ಎನ್. ನಾರಾಯಣಸ್ವಾಮಿ ಮತ್ತು ಶ್ರೀ ಚಿನ್ನಸ್ವಾಮಿಯವರವರಿಗೆ ಶ್ರೀಮತಿ ಸಾವಿತ್ರಮ್ಮ ರವರು ಬರೆದುಕೊಟ್ಟು ಬೆಂಗಳೂರು ಕೃಷ್ಣರಾಜಪುರ ಉಪನೋಂದಣಾಧಿಕಾರಿಯರ ಕಛೇರಿಯಲ್ಲಿ 4ನೇ ಪುಸ್ತಕದ 27ನೇ ಸಂಪುಟದ ಪುಟ ಸಂಖ್ಯೆ 124 ರಿಂದ 125 ರಲ್ಲಿ ದಾಖಲಾದ **ದಸ್ತಾವೇಜು ಸಂಖ್ಯೆ 474/1993-94** ಆಗಿ ನೋಂದಣಿಯಾಗಿರುವ 07-02-1994ರ ದಿನಾಂಕದ ಮೂಲ ಸಾಮಾನ್ಯ ಅಧಿಕಾರ ಪತ್ರ, ಸದರಿ ಶ್ರೀಮತಿ ಸಾವಿತ್ರಮ್ಮ ರವರ ಪರವಾಗಿ ಅವರ ಸಾಮಾನ್ಯ ಅಧಿಕಾರ ಪತ್ರ ಹೊಂದಿರುವ ಶ್ರೀ ಎನ್. ನಾರಾಯಣಸ್ವಾಮಿ ಮತ್ತು ಶ್ರೀ ಚಿನ್ನಸ್ವಾಮಿಯವರು ಶ್ರೀ ಡಿ. ಮುನಿಯಲ್ಲಪ್ಪರವರಿಗೆ ಬರೆದುಕೊಟ್ಟು ಬೆಂಗಳೂರು ಕೃಷ್ಣರಾಜಪುರ ಉಪನೋಂದಣಾಧಿಕಾರಿಯರ ಕಛೇರಿಯಲ್ಲಿ **ದಸ್ತಾವೇಜು ಸಂಖ್ಯೆ ಕೆಆರ್‌ಐ-1-27840/2004-05** ಆಗಿ ನೋಂದಣಿಯಾಗಿ ಸಿ.ಡಿ.ಸಂಖ್ಯೆ ಕೆಆರ್‌ಐಡಿ104 ರಲ್ಲಿ ಶೇಖರಣೆಯಾದ 17-01-2005 ನೇ ದಿನಾಂಕದ ಮೂಲ ಕ್ರಯಪತ್ರ ಹಾಗೂ ಶ್ರೀ ಡಿ. ಮುನಿಯಲ್ಲಪ್ಪನವರು ಶ್ರೀ ಸಂತೋಷ್ ನಾಯರ್‌ರವರಿಗೆ ಬರೆದುಕೊಟ್ಟು ಬೆಂಗಳೂರು ಕೃಷ್ಣರಾಜಪುರ ಉಪನೋಂದಣಾಧಿಕಾರಿಯರ ಕಛೇರಿಯಲ್ಲಿ **ದಸ್ತಾವೇಜು ಸಂಖ್ಯೆ ಕೆಆರ್‌ಐ-1-06958/2005-06** ಆಗಿ ನೋಂದಣಿಯಾಗಿ ಸಿ.ಡಿ.ಸಂಖ್ಯೆ ಕೆಆರ್‌ಐಡಿ151 ರಲ್ಲಿ ಶೇಖರಣೆಯಾದ 12-08-2005ನೇ ದಿನಾಂಕದ ಮೂಲ ಕ್ರಯಪತ್ರ ಕಳೆದುಹೋಗಿರುತ್ತವೆ.

ಸದರಿ ಮೂಲ ದಾಖಲೆಗಳು ಯಾರಿಗಾದರು ಸಿಕ್ಕಿದ್ದು, ಈ ಕೆಳಕಂಡವರಿಗೆ ಮಾಹಿತಿ ನೀಡಿದ್ದಲ್ಲಿ ಅಥವಾ ಹಿಂದಿರುಗಿಸಿದ್ದಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ತೆರನಾದ ಹಕ್ಕಿದ್ದಲ್ಲಿ ಸೂಕ್ತ ಪುರಾವೆಯೊಂದಿಗೆ ಲಿಖಿತ ರೂಪದಲ್ಲಿ ಈ ಕೆಳಕಂಡವರಿಗೆ ತಕ್ಷಣ ಸಲ್ಲಿಸುವುದು.

ಸಹಿ/-

ಮೋಹನದಾಸ ಎನ್., ನ್ಯಾಯವಾದಿ,
3944/ಎ, ಎರಡನೇ ಅಡ್ಡರಸ್ತೆ, ಬಿ ಬ್ಲಾಕ್,
ರಾಜಾಜಿನಗರ 2ನೇ ಹಂತ, ಸುಬ್ರಹ್ಮಣ್ಯನಗರ,
ಬೆಂಗಳೂರು-560021.
ಸಂ.ದೂ: 9448129391 / 9886776714

ಜೆ.ಪಿ.ನಡ್ಡಾ ವಿರುದ್ಧ ಪ್ರಕರಣ ವಜಾ

ವಿಧಾನಸಭಾ ಚುನಾವಣೆ ವೇಳೆ ಶಿಗ್ಗಾವಿ ಠಾಣೆಯಲ್ಲಿ ದಾಖಲಾಗಿದ್ದ ಕೇಸ್

ಬೆಂಗಳೂರು: ಕಳೆದ ವಿಧಾನಸಭೆ ಚುನಾವಣೆ ವೇಳೆ ಸಾರ್ವಜನಿಕ ಹೇಳಿಕೆ ನೀಡುವ ಮೂಲಕ ಮತದಾರರ ಮೇಲೆ ಅನುಚಿತವಾಗಿ ಪ್ರಭಾವ ಬೀರಿದ ಆರೋಪದ ಹಿನ್ನೆಲೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಜೆ.ಪಿ.ನಡ್ಡಾ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ಗುರುವಾರ ರದ್ದುಪಡಿಸಿದೆ.



ಚುನಾವಣಾ ಪ್ರಚಾರದ ವೇಳೆ ನಡ್ಡಾ ಅವರು ಬಿಜೆಪಿಗೆ ಮತ ನೀಡಿ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಆಶೀರ್ವಾದಿಂದ ಕರ್ನಾಟಕ ವಂಚಿತವಾಗದಂತೆ ನೋಡಿಕೊಳ್ಳಿ ಎಂದು ಸಾರ್ವಜನಿಕ ಹೇಳಿಕೆ ನೀಡುವ ಮೂಲಕ ಮತದಾರರ ಮೇಲೆ ಪ್ರಭಾವ ಬೀರಿದ್ದಾರೆ ಎಂದು ಹಾವೇರಿ ಜಿಲ್ಲೆಯ ಶಿಗ್ಗಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತಮ್ಮ ವಿರುದ್ಧದ ಎಫ್ ಐಆರ್ ಮತ್ತು ಹಾವೇರಿ ಪ್ರಧಾನ ಸಿವಿಲ್ ನ್ಯಾಯಾಲಯದ ಮುಂದಿರುವ ವಿಚಾರಣೆ ಪ್ರಕ್ರಿಯೆ ರದ್ದುಪಡಿಸುವಂತೆ ಕೋರಿ ಜೆ.ಪಿ.ನಡ್ಡಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ.

ಪ್ರಕರಣದ ಹಿನ್ನೆಲೆ

ಕಳೆದ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ 2023ರ ಏಪ್ರಿಲ್ 19ರಂದು ಮಧ್ಯಾಹ್ನ 1.15ರಿಂದ 1.50ರ ಅವಧಿಯಲ್ಲಿ ಶಿಗ್ಗಾವಿ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದ ಜೆ.ಪಿ.ನಡ್ಡಾ ಅವರು ಕರ್ನಾಟಕದ ಜನತೆ ಬಿಜೆಪಿಗೆ ಮತ ನೀಡಿ, ಪ್ರಧಾನಿ ನರೇಂದ್ರ ಮೋದಿಯವರ ಒಲವು ಗಳಿಸಿರಿ. ಕರ್ನಾಟಕವು ಮೋದಿಯವರ ಆಶೀರ್ವಾದ ಹೊಂದಿದೆ. ಅದರಿಂದ ವಂಚಿತವಾಗದಂತೆ ನೋಡಿಕೊಳ್ಳಿ ಎಂದು ಹೇಳಿಕೆ ನೀಡಿದ್ದರು ಎಂದು ಚುನಾವಣಾಧಿಕಾರಿಯಾಗಿದ್ದ ಲಕ್ಷ್ಮಣ್ ನಂದಿ ಅವರು ಶಿಗ್ಗಾವಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಜೆ.ಪಿ.ನಡ್ಡಾ ಅವರು ಮತದಾರರ ಮೇಲೆ ಅನುಚಿತ ಪ್ರಭಾವ ಬೀರುವ ಮೂಲಕ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆ ಎಂದು ಆರೋಪಿಸಿದ್ದರು.

ನಡ್ಡಾ ವಕೀಲರ ವಾದ: ನಡ್ಡಾ ಅವರನ್ನು ಪ್ರತಿನಿಧಿಸಿದ್ದ ವಕೀಲ ಎಂ.ವಿನೋದ್ ಕುಮಾರ್ ಅವರು ಚುನಾವಣಾ ಸಮಾವೇಶದಲ್ಲಿ ಭಾಷಣ ಪರಿಶೀಲಿಸಿದರೆ ಅದರಲ್ಲಿ ಐಪಿಸಿ ಸೆಕ್ಷನ್‌ಗಳಾದ 171ಸಿ (ಚುನಾವಣೆಯ ಮೇಲೆ ಪ್ರಭಾವ ಬೀರುವುದು) ಮತ್ತು 171ಎಫ್ (ಚುನಾವಣೆಯ ಮೇಲೆ ಪ್ರಭಾವ ಬೀರಿದ್ದಕ್ಕೆ ಶಿಕ್ಷೆ) ಅಡಿ ಯಾವುದೇ ಅಪರಾಧ ಕಾಣಸಿಗುವುದಿಲ್ಲ. ಇದರಲ್ಲಿ ಪ್ರಭಾವ ಬೀರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪ್ರಕರಣದಲ್ಲಿ ಯಾವುದೇ ತಿರುಳಿಲ್ಲ ಎಂದರು. ಆಗ ಪೀಠವು ಮೌಖಿಕವಾಗಿ ಭಾಷಣ ಮತ್ತು ಪ್ರಕರಣದಲ್ಲಿ ಏನೂ ಇಲ್ಲ ಎಂದು ಎಫ್‌ಐಆರ್ ವಜಾ ಮಾಡಿತು.

ಲೈವ್ ವ್ಲಾಗ್ ಮಾಡುತ್ತಿದ್ದಾಗ ಎದೆ ಸ್ಪರ್ಶಿಸಿದ ಬಾಲಕ

ಬೆಂಗಳೂರು: ನಗರದ ಬಿಟಿಎಂ ಲೇಔಟ್‌ನ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಯುವತಿಯೊಬ್ಬಳ ಎದೆ ಸ್ಪರ್ಶಿಸಿ ಅಪ್ರಾಪ್ತ ವಯಸ್ಸಿನ ಬಾಲಕನೊಬ್ಬ ಕಿರುಕುಳ ನೀಡಿದ ಘಟನೆ ಸುದ್ದಗುಂಟೆಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ವಿಡಿಯೊ ಹಾಕಿ ಕಣ್ಣೀರಿಟ್ಟ ಯುವತಿ

ಸಂತ್ರಸ್ತ ಯುವತಿ ನೇಹಾ ಬಿಸ್ವಾಲ್ ಅವರು ಈ ಕುರಿತ ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದು, ಕಣ್ಣೀರಿಟ್ಟಿದ್ದಾರೆ. ಕೆಲಸ ಮುಗಿಸಿ ಮನೆಗೆ ಮರಳುವಾಗ ಓರ್ವ ಹುಡುಗ ಸೈಕಲ್‌ನಲ್ಲಿ ಬಂದಿದ್ದು ಆಕೆಯ ಎದೆಯನ್ನು ಮುಟ್ಟಿದ್ದಾನೆ. ಇದೇ ಸಮಯದಲ್ಲಿ ನೇಹಾ ವಿಡಿಯೊ ವ್ಲಾಗ್ ರೆಕಾರ್ಡ್ ಮಾಡುತ್ತಿದ್ದು, ವಿಡಿಯೊ ಕ್ಯಾಮರಾದಲ್ಲಿ ದಾಖಲಾಗಿದೆ.

ವ್ಲಾಗ್ ಮಾಡುತ್ತಿದ್ದಾಗ ಹುಡುಗನಿಂದ ಕಿರುಕುಳ ಅನುಭವಿಸಿದೆ ಎಂದು ವ್ಲಾಗರ್ ನೇಹಾ ಹೇಳಿದ್ದಾರೆ. ನಾನು ವ್ಲಾಗ್ ಮಾಡುತ್ತಿದ್ದೆ. ಈ ವೇಳೆ ಒಬ್ಬ ಹುಡುಗ ಸೈಕಲ್ ಓಡಿಸುತ್ತಾ ನನ್ನ ಮುಂದೆ ಹಾದು ಹೋದನು. ಇದೇ ಸಂದರ್ಭದಲ್ಲಿ ನನ್ನನ್ನು ನೋಡಿ ಯು-ಟರ್ನ್ ತೆಗೆದುಕೊಂಡು ನನ್ನ ಕಡೆಗೆ ಬರಲು ಪ್ರಾರಂಭಿಸಿದ.

ಮೊದಲಿಗೆ ಆತ ನನ್ನನ್ನು ಗೇಲಿ ಮಾಡಿ ನನ್ನನ್ನು ಕ್ಯಾಮೆರಾದಲ್ಲಿ ಅನುಕರಿಸಿದ. ಅಲ್ಲದೆ, ನನ್ನ ಎದೆಯನ್ನು ಮುಟ್ಟಿ ನನ್ನೊಂದಿಗೆ ಅನುಚಿತವಾಗಿ ವರ್ತಿಸಿದ. ಬಳಿಕ ಓಡಿಹೋಗಲು ಯತ್ನಿಸಿದ ಆ ಬಾಲಕನನ್ನು ಸಾರ್ವಜನಿಕರು ಹಿಡಿದರು. ಆ ಹುಡುಗನಿಗೆ ಹತ್ತು ವರ್ಷ. ಅವನು ಬಾಲಕನಾಗಿದ್ದರಿಂದ ಅವನನ್ನು ಕ್ಷಮಿಸುವಂತೆ ನೇಹಾ ಜನರನ್ನು ಕೇಳಿಕೊಂಡರು.

ಸಮಾಚಾರ ಸಣ್ಣದಲ್ಲ

ಅಂಕಣಕಾರರೊಂದಿಗೆ ಸಂವಾದ ನ.14ಕ್ಕೆ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ವತಿಯಿಂದ ನ.14ರಂದು ಅಂಕಣಕಾರರ ಸಂವಾದವನ್ನು ಹಮ್ಮಿಕೊಳ್ಳಲಾಗಿದೆ. ಬೆಂಗಳೂರಿನ ಶಂಕರಪುರದಲ್ಲಿರುವ ಉತ್ತುಂಗದಲ್ಲಿ ಈ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಆರ್ ಎಸ್‌ಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಈ ಸಂವಾದದಲ್ಲಿ ಭಾಗವಹಿಸಲಿದ್ದಾರೆ. ಬೆ.9.30ರಿಂದ ಸಂಜೆ 5ಗಂಟೆಯವರೆಗೆ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಈ ಸಂವಾದದಲ್ಲಿ ಆರ್ಗನೈಸರ್ ಸಂಪಾದಕ ಪ್ರಫುಲ್ಲ ಕೇತ್ಕರ್ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 8722552497 ಸಂಪರ್ಕಿಸಿ.

ಎರಡು ದಿನ ನೃತ್ಯ ನಾಟಕೋತ್ಸವ

ಬೆಂಗಳೂರು: ನೂಪುರ ಕಲಾವಿದರ ಸಾಂಸ್ಕೃತಿಕ ಟ್ರಸ್ಟ್‌ನ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನ.11 ಮತ್ತು 12ರಂದು ಸಂಜೆ 6.00 ಗಂಟೆಗೆ ನಗರದ ಗಾನಭಾರತೀ ರಮಾಗೋವಿಂದ ಕಲಾವೇದಿಕೆಯಲ್ಲಿ ಎರಡು ದಿನಗಳ ನೃತ್ಯ ನಾಟಕೋತ್ಸವ ಆಯೋಜಿಸಲಾಗಿದೆ. ನ.11ರ ಸಂಜೆ 6 ಗಂಟೆಗೆ ಮನುವಿದ್ಯಾ ಕಲ್ಚರಲ್ ಫೌಂಡೇಷನ್ ನೃತ್ಯ ವಿದುಷಿ ನೇತ್ರಾ.ಎಸ್ ನಿರ್ದೇಶನದಲ್ಲಿ ಚಿಂತನ ರಾಮಾಯಣ ಎಂಬ ನೃತ್ಯನಾಟಕ ಪ್ರದರ್ಶಿತವಾಗಲಿದೆ ಹಾಗೂ ಸಂಜೆ 7 ಗಂಟೆಗೆ ಬೆಂಗಳೂರಿನ ಕೇಶವ ನೃತ್ಯ ಶಾಲಾದ ನಿರ್ದೇಶಕ ಕಲಾಯೋಗಿ ಗುರು ಎಸ್. ರಘುನಂದನ್ ನಿರ್ದೇಶನದಲ್ಲಿ 'ಶ್ರೀ ಸುಧಾಮಚರಿತೆ' ಎಂಬ ನೃತ್ಯನಾಟಕ ಪ್ರದರ್ಶಿತವಾಗಲಿದೆ. ನ.12 ರಂದು ಸಂಜೆ 6ಕ್ಕೆ ನೃತ್ಯತಿ ಕಲಾಶಾಲೆಯ ನೃತ್ಯವಿದುಷಿ ಅನುಷಾ ವರುಣ್ ನಿರ್ದೇಶನದಲ್ಲಿ 'ವಿಶ್ವಾಮಿತ್ರ ಗಾಯತ್ರಿ' ಎಂಬ ನೃತ್ಯನಾಟಕ ಪ್ರದರ್ಶನವಿದೆ. ಸಂಜೆ 7 ಗಂಟೆಗೆ ಮಂಗಳೂರಿನ ಕದ್ರಿ ನೃತ್ಯ ವಿದ್ಯಾನಿಲಯ ಚಾರಿಟೇಬಲ್ ಟ್ರಸ್ಟ್‌ನ ಕಲಾವಿದರಿಂದ ನಾಟ್ಯವಿಶಾರದ ಗುರು ಕುಲಭೂಷಣ ವಿದ್ವಾನ್ ಯು.ಕೆ. ಪ್ರವೀಣ್ ಅವರ ನಿರ್ದೇಶನದಲ್ಲಿ 'ಶ್ರೀಕೃಷ್ಣಲೀಲಾ' ಎಂಬ ನೃತ್ಯ ನಾಟಕ ಪ್ರದರ್ಶಿತವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ಸಂಸದ ತೇಜಸ್ವಿ ಸೂರ್ಯ ಜತೆಗಿನ ಸಂಭಾಷಣೆಯ ವಿಡಿಯೊ ವೈರಲ್

ವಿವಾದಕ್ಕೆ ಕಾರಣವಾದ ತಗ್ಗಿಬಗ್ಗಿ ಹೇಳಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

- ಅನುದಾನ ಬೇಕೆಂದರೆ ತಗ್ಗಿಬಗ್ಗಿ ನಡೆಯಬೇಕೆಂದಿದ್ದ ಡಿಕೆ
- ಬೆಂಗಳೂರು ಡಿಕೆಶಿ ಜಹಗೀರ್‌ದಾರ್ ಅಲ್ಲ : ಅಶೋಕ್

ಬೆಂಗಳೂರು ಭಾಗದ ಶಾಸಕರಿಗೆ ಅನುದಾನ ಹಂಚಿಕೆ ವಿಷಯದಲ್ಲಿ ತಾರತಮ್ಯವಾಗಿದೆ ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯಗೆ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ನೀಡಿರುವ ಹೇಳಿಕೆ ಭಾರಿ ವಿವಾದಕ್ಕೆ ಕಾರಣವಾಗಿದ್ದು, ಬಿಜೆಪಿಗರು ಆಕ್ಷೇಪವ್ಯಕ್ತಪಡಿಸಿದ್ದಾರೆ.

ಬುಧವಾರ ನಾಗಸಂದ್ರ-ಮಾದಾವಾರ ಮೆಟ್ರೋ ರೈಲು ಪರಿಶೀಲನೆ ವೇಳೆ ಮೆಟ್ರೋದಲ್ಲಿ ತೆರಳುವಾಗ ಸಂಸದ ತೇಜಸ್ವಿ ಸೂರ್ಯ ಅವರೊಂದಿಗೆ ಚರ್ಚಿಸುವಾಗ ಡಿಸಿಎಂ ಡಿ.ಕೆ. ಶಿವಕುಮಾರ್, 'ನನ್ನ ಬಳಿ ತಗ್ಗಿ ಬಗ್ಗಿ ಇರಬೇಕು, ಬೇರೆಯವರ ಜತೆಗಿದ್ದಂತೆ ಇದ್ದರೆ ಆಗುವುದಿಲ್ಲ' ಎಂದು ಹೇಳಿದ್ದಾರೆ. ಜಯನಗರ ಕ್ಷೇತ್ರಕ್ಕೆ ಅನುದಾನ ತಡೆಹಿಡಿದಿರುವುದು ಏಕೆ ಎಂದು ಸೂರ್ಯ ಪ್ರಶ್ನಿಸಿದ್ದಕ್ಕೆ ಡಿಕೆ ಈ ಹೇಳಿಕೆ ನೀಡಿದ್ದಾರೆ. ಇದೀಗ ಇದು ಭಾರಿ ವಿವಾದಕ್ಕೆ ಕಾರಣವಾಗಿದೆ.

ಆಗಿದ್ದೇನು?: ಮೆಟ್ರೋದಲ್ಲಿ ಸಂಚರಿಸುವಾಗ ಸಂಸದ ತೇಜಸ್ವಿ ಸೂರ್ಯ ಅವರು, ಜಯನಗರ ಅನುದಾನಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಡಿ.ಕೆ. ಶಿವಕುಮಾರ್, ಜಯನಗರ ಶಾಸಕ ಸಿಕೆ ರಾಮಮೂರ್ತಿಯ ಮಾತು ಹೆಚ್ಚಾಯಿತು. ಆಸ್ಪತ್ರೆಯನ್ನು ಕಿತ್ತುಹಾಕಿಸಿದ್ದೇನೆ, ನನ್ನ ಬಳಿ ತಗ್ಗಿ ಬಗ್ಗಿ ಇರಬೇಕು. ಬೇರೆಯವರ ರೀತಿ ಇದ್ದಹಾಗೆ ನನ್ನ ಹತ್ತಿರ ಇದ್ದರೆ ಆಗುವುದಿಲ್ಲ. ನಾನು ಅಧಿಕಾರಕ್ಕೆ ಬಂದಮೇಲೆ ಬೆಂಗಳೂರು ಅಧೋಗತಿ ತಲುಪಿದೆ ಎಂದಿದ್ದ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಬಿಎಂಪಿ ವ್ಯಾಪ್ತಿಯ ಎಲ್ಲ ವಿಧಾನಸಭಾ ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ತಲಾ 10 ಕೋಟಿ ಮಂಜೂರು ಮಾಡಿ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಡಿಸಿಎಂ ಇತ್ತೀಚೆಗೆ ಆದೇಶ ಹೊರಡಿಸಿದ್ದರು. ಆದರೆ, ಬಿಜೆಪಿ ಶಾಸಕರಿರುವ ಜಯನಗರ ಕ್ಷೇತ್ರಕ್ಕೆ ಮಾತ್ರ ಅನುದಾನ ಮಂಜೂರು ಮಾಡಿರಲಿಲ್ಲ. ಈ ವಿಚಾರವಾಗಿ ಪ್ರತಿಪಕ್ಷ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿತ್ತು.

ಡಿಕೆ ಶಿವಕುಮಾರ್ ಅವರೇ, ನಿಮ್ಮ ಬಳಿ ತಗ್ಗಿ-ಬಗ್ಗಿ ಇರಬೇಕು ಅನ್ನುವುದಕ್ಕೆ ಬೆಂಗಳೂರು ನಗರವನ್ನು ನಿಮ್ಮ ಜಹಗೀರು ಅಂದುಕೊಂಡಿದ್ದೀರಾ? ಅಧಿಕಾರ ಎನ್ನುವುದು ಮತದಾರರು ಕೊಟ್ಟಿರುವ ಭಿಕ್ಷೆ, ಸಂವಿಧಾನ ಕೊಟ್ಟಿರುವ ಜವಾಬ್ದಾರಿಯೇ ಹೊರತು ಪಾಳೆಗಾರಿಕೆ ಅಲ್ಲ. ಪ್ರಜಾಪ್ರಭುತ್ವದಲ್ಲಿ ನಾವು ತಗ್ಗಿ-ಬಗ್ಗಿ ನಡೆಯಬೇಕಿರುವುದು ಮತಭಿಕ್ಷೆ ನೀಡಿರುವ ಮತದಾರ ಪ್ರಭುಗಳಿಗೆ, ಪ್ರಜಾಪ್ರಭುತ್ವ ವ್ಯವಸ್ಥೆ ನೀಡಿರುವ ಸಂವಿಧಾನಕ್ಕೆ ಹೊರತು ಯಾವ ದೊಣ್ಣೆ ನಾಯಕನಿಗೂ ಅಲ್ಲ. ಈ ನಿಮ್ಮ ಪ್ರತಿಷ್ಠೆ, ಧಿಮಾಕು, ದರ್ಬಾರು ಎಲ್ಲ ಬಿಟ್ಟು ಜನರ ಸೇವೆ ಮಾಡುವ ಮನೋಭಾವನೆ ಬೆಳೆಸಿಕೊಳ್ಳಿ. ಯಾವುದೇ ಕ್ಷೇತ್ರದ ಬಗ್ಗೆ ತಾರತಮ್ಯ ಮಾಡದೆ ಸಚಿವರಾಗಿ ನಿಮ್ಮ ಕರ್ತವ್ಯ ನಿರ್ವಹಿಸಿ.

-ಆರ್. ಅಶೋಕ್, ಪ್ರತಿಪಕ್ಷ ನಾಯಕ

ಕೆಐಎನಲ್ಲಿ ಅತಿದೊಡ್ಡ ವರ್ಟಿಕಲ್ ಗಾರ್ಡನ್

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರಲ್ಲಿ ಟೈಗರ್ ವಿಂಗ್ಸ್ ಶೀರ್ಷಿಕೆಯ ವರ್ಟಿಕಲ್ ಗಾರ್ಡನ್ ಅನ್ನು ಅನಾವರಣಗೊಳಿಸಲಾಯಿತು.

ಫ್ರೆಂಚ್ ದೇಶದ ರಾಷ್ಟ್ರೀಯ ವೈಜ್ಞಾನಿಕ ಸಂಶೋಧನಾ ಕೇಂದ್ರದೊಂದಿಗೆ ಗುರುತಿಸಿಕೊಂಡಿರುವ ವಿಶ್ವದರ್ಜೆಯ ಸಸ್ಯಶಾಸ್ತ್ರಜ್ಞ ಪ್ಯಾಟ್ರಿಕ್ ಬ್ಲಾಂಕ್ ಅವರ ಸಹಯೋಗದೊಂದಿಗೆ ಈ ವರ್ಟಿಕಲ್ ಗಾರ್ಡನ್ ಸುಂದರವಾಗಿ ವಿನ್ಯಾಸಗೊಳಿಸಲಾಗಿದ್ದು, ಟರ್ಮಿನಲ್ 2 ನಲ್ಲಿ ನಿರ್ಮಿಸಿರುವ ಈ ವರ್ಟಿಕಲ್ ಗಾರ್ಡನ್ 30 ಅಡಿ ಎತ್ತರ ಹಾಗೂ 160 ಅಡಿ ಅಗಲದಲ್ಲಿ ವಿಸ್ತೃತವಾಗಿ ಬೆಳೆಸಲಾಗಿದೆ. ಪ್ಯಾಟ್ರಿಕ್ ಬ್ಲಾಂಕ್ ಭಾರತದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ವರ್ಟಿಕಲ್ ಗಾರ್ಡನ್ ನಿರ್ಮಿಸಿದ್ದು ಇದೇ ಮೊದಲಾಗಿದ್ದು, ಮೂಲಭೂತ ಸೌಕರ್ಯಗಳೊಂದಿಗೆ ಪ್ರಕೃತಿ ಸೆರೆ ಹಿಡಿದಂತ ಸುಂದರ ದೃಶ್ಯಾವಳಿಂದ ಈ ಗೋಡೆ ಉದ್ಯಾನ ಕಂಗೊಳಿಸಲಿದೆ.

ಟೈಗರ್ ವಿಂಗ್ಸ್‌ನ ಈ ವರ್ಟಿಕಲ್ ಗಾರ್ಡನ್ 153 ವಿವಿಧ ಜಾತಿಗಳ 15,000 ಕ್ಕೂ ಹೆಚ್ಚು ಸಸ್ಯಗಳಿಂದ ನಿರ್ಮಿಸಲಾಗಿದ್ದು, ಪ್ಯಾಟ್ರಿಕ್ ಬ್ಲಾಂಕ್ ಅವರು ಕರ್ನಾಟಕ ಸೇರಿದಂತೆ ಸುತ್ತಮುತ್ತಲಿನ ಪಶ್ಚಿಮ ಘಟ್ಟಗಳ ಕಾಡುಗಳಿಗೆ ತೆರಳಿ, ಅಪರೂಪದ ಆಯ್ದ ಸಸ್ಯ ಪ್ರಭೇದ ಸಂಗ್ರಹಿಸಿ, ಈ ಗೋಡೆ ಉದ್ಯಾನ ನಿರ್ಮಿಸಿದ್ದಾರೆ. ಈ ಗೋಡೆ ಉದ್ಯಾನವನ್ನು ಮಣ್ಣು ರಹಿತವಾಗಿ ನಿರ್ಮಿಸಲಾಗಿದೆ.

ನಮ್ಮ ರಾಷ್ಟ್ರೀಯ ಪ್ರಾಣಿ ಹುಲಿಯ ಶಕ್ತಿ ಮತ್ತು ಅದರ ಗಾಂಭೀರ್ಯತೆ ಪ್ರತಿಬಿಂಬಿಸುವಂತೆ ಈ ಗೋಡೆ

ಕೆಐಎ ಟರ್ಮಿನಲ್ 2ರಲ್ಲಿ ಟೈಗರ್ ವಿಂಗ್ಸ್ ಶೀರ್ಷಿಕೆಯ ವರ್ಟಿಕಲ್ ಗಾರ್ಡನ್ ಅನ್ನು ಅನಾವರಣಗೊಳಿಸಲಾಯಿತು.

ಬೆಂಗಳೂರಿನಲ್ಲಿ ಸುಸ್ಥಿರತೆ, ಕಲಾತ್ಮಕತೆ ಮತ್ತು ತಾಂತ್ರಿಕ ಪ್ರಗತಿಯಲ್ಲಿ ಹೊಸ ದೃಷ್ಟಿಕೋನ ತರಲು ಬಯಸಿದ್ದೇವೆ. ಬಿಎಲ್‌ಆರ್ ವಿಮಾನ ನಿಲ್ದಾಣದಲ್ಲಿ ಪ್ಯಾಟ್ರಿಕ್ ರ ಹೊಸ ವಿಧಾನದಿಂದ ಪ್ರಕೃತಿಯ ಮಡಿಲಿನಲ್ಲಿ ಸಸ್ಯಗಳನ್ನು ಬೆಳೆಯುವಂತೆಯೇ ಬೆಳೆಯಲು ಅನುವು ಮಾಡಿಕೊಟ್ಟಿದೆ.

-ಹರಿ ಮರಾರ್, ಬಿಐಎಎಲ್ ವ್ಯವಸ್ಥಾಪಕ ನಿರ್ದೇಶಕ

ಟೈಗರ್ ವಿಂಗ್ಸ್‌ನ ಪ್ರಮುಖಾಂಶಗಳು

- ಭಾರತದಲ್ಲಿ ಪ್ಯಾಟ್ರಿಕ್ ಬ್ಲಾಂಕ್ ಅವರ ಅತಿದೊಡ್ಡ ಗೋಡೆ ಉದ್ಯಾನ ಇದೇ ಮೊದಲು
- 4000 ಚದರ ಅಡಿಗಳಲ್ಲಿ ನಿರ್ಮಿಸಲಾಗಿದೆ.

ತಿರುಮಲ-ತಿರುಪತಿ ದೇವಸ್ಥಾನ ಆಡಳಿತ ಮಂಡಳಿಯ ಸದಸ್ಯ ನರೇಶ್ ಕುಮಾರ್

ಟಿಟಿಡಿ ಸದಸ್ಯತ್ವ ಅವಕಾಶ ನನ್ನ ಪುಣ್ಯ

ಸವಿತಾ ಸಮಾಜ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ನರೇಶ್ ಕುಮಾರ್ ಅವರು ಗುರುವಾರ ಟಿಟಿಡಿಯ ಸದಸ್ಯರಾಗಿ ಅಧಿಕಾರ ಸ್ವೀಕರಿಸಿದರು.

ಬೆಂಗಳೂರು: ತಿರುಮಲ-ತಿರುಪತಿ ದೇವಸ್ಥಾನ ಆಡಳಿತ ಮಂಡಳಿಯ ಸದಸ್ಯನಾಗಲು ನನಗೆ ಅವಕಾಶ ದೊರೆತದ್ದು ನನ್ನ ಪೂರ್ವಜನ್ಮದ ಪುಣ್ಯವಾಗಿದ್ದು, ಇದು ರಾಜ್ಯದ ಸವಿತಾ ಸಮುದಾಯದ ಜತೆಗೆ ಹಿಂದುಳಿದ ಸಮುದಾಯಗಳಿಗೆ ದೊರೆತ ಗೌರವ ಎಂದು ಸವಿತಾ ಸಮಾಜ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಹಾಗೂ ಟಿಟಿಡಿ ಸದಸ್ಯ ಎಸ್.ನರೇಶ್ ಕುಮಾರ್ ಹೇಳಿದರು.

ಟಿಟಿಡಿ ಬೋರ್ಡ್‌ನ ಸದಸ್ಯರಾಗಿ ಅಧಿಕಾರ ಸ್ವೀಕರಿಸಿ ಮಾತನಾಡಿದ ನರೇಶ್, ವಿಶ್ವದ ಅತಿದೊಡ್ಡ ದೇವಾಲಯವಾದ ಟಿಟಿಡಿಗೆ ಹಿಂದುಳಿದ ಹಾಗೂ ಸವಿತಾ ಸಮುದಾಯಕ್ಕೆ ಸೇರಿದ ವ್ಯಕ್ತಿಯನ್ನು ಸದಸ್ಯರನ್ನಾಗಿ ಆಯ್ಕೆ ಮಾಡಿರುವುದು ಬಹಳ ಸಂತಸದ ವಿಷಯ. ನಮ್ಮ ಸಮುದಾಯ ಹಿಂದುಳಿದ ಸಮುದಾಯವಾಗಿದೆ. ಈ ಸಮುದಾಯದ ಬಗ್ಗೆ ಸಮಾಜದಲ್ಲಿ ಇರುವ ಅಭಿಪ್ರಾಯವನ್ನು ಬದಲಿಸುವ ನಿಟ್ಟಿನಲ್ಲಿ ಇದೊಂದು ಕ್ರಾಂತಿಕಾರಿ ನೇಮಕವಾಗಿದೆ. ಇಂತಹ ಐತಿಹಾಸಿಕ ಅವಕಾಶ ನನಗೆ ದೊರೆಯಲು ನನ್ನ ಗುರುಗಳು, ಭಾರತೀಯ ಜನತಾ ಪಕ್ಷದ ರಾಷ್ಟ್ರ ಹಾಗೂ ರಾಜ್ಯಮಟ್ಟದ ನಾಯಕರು ವಿಶೇಷವಾಗಿ ಸೋಷಿಯಲ್ ಎಂಜಿನಿಯರಿಂಗ್ ನ ಮೂಲಕ ಬದಲಾವಣೆಗೆ ಕಾರಣರಾದ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೆ ಚಿರಋಣಿಯಾಗಿದ್ದೇನೆ ಎಂದರು.

ಕಲ್ಯಾಣಕಟ್ಟೆಗೆ ಭೇಟಿ

ಸದಸ್ಯರಾಗಿ ಅಧಿಕಾರ ಸ್ವೀಕರಿಸುವ ಮೊದಲು ಪ್ರತಿನಿತ್ಯ 35 ಸಾವಿರಕ್ಕೂ ಹೆಚ್ಚು ಜನರು ಮುಡಿಕೊಡುವ ಕಲ್ಯಾಣ ಕಟ್ಟೆಗೆ ಭೇಟಿ ನೀಡಿದ ನರೇಶ್, ಅಲ್ಲಿನ ಕ್ಷೌರಿಕರೊಂದಿಗೆ ಚರ್ಚಿಸಿ ಸಮಸ್ಯೆ ಹಾಗೂ ಸುಧಾರಣೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ನಂತರ ಅಧಿಕಾರ ಸ್ವೀಕರಿಸಿದರು. ಟಿಟಿಡಿ ಸದಸ್ಯರಾಗಿ ಹಿಂದುಳಿದ ಹಾಗೂ ತಳಮಟ್ಟದ ಸಮುದಾಯಗಳ ಜನರು ಸ್ವಾಮಿಯ ಸೇವೆಗೆ ಅವಕಾಶ ಮಾಡಿಕೊಡುವುದು ನನ್ನ ಗುರಿಯಾಗಿದೆ ಎಂದು ತಿಳಿಸಿದರು.

---

5 ದಿನಗಳ ಕಾಲ ಮ್ಯಾಜಿಕ್ ಶೋ

ಬೆಂಗಳೂರು: ನಗರದ ಟೌನ್ ಹಾಲ್‌ನಲ್ಲಿ ನ.9, 10, 16, 17ಮತ್ತು 18ರಂದು ಜಾದೂಗಾರರಾದ ಪಿ.ಸಿ.ಸರ್ಕಾರ್‌ರ ಮ್ಯಾಜಿಕ್ ಶೋ ಇಂದ್ರಜಾಲ ಪ್ರದರ್ಶನ ಆಯೋಜಿಸಲಾಗಿದೆ.

ಐದು ವರ್ಷಗಳ ಬಳಿಕ ವಿಶ್ವವಿಖ್ಯಾತ ಜಾದೂಗಾರರಾದ ಪಿ.ಸಿ.ಸರ್ಕಾರ್ ನಗರದಲ್ಲಿ ಮೆಗಾ ಮ್ಯಾಜಿಕ್ ಶೋ ಇಂದ್ರಜಾಲ ಪ್ರದರ್ಶನ ನಡೆಸಿಕೊಡಲಿದ್ದಾರೆ. ಮ್ಯಾಜಿಕ್ ಪರಂಪರೆ ಪರಿಗಣಿಸಿದಾಗ ಪಿ.ಸಿ.ಸರ್ಕಾರ್ ಕುಟುಂಬ ವಿಶ್ವದ ಶ್ರೇಷ್ಠ ಜಾದೂಗಾರರ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ. ಭಾರತೀಯ ಮ್ಯಾಜಿಕ್ ಅನ್ನು ವಿಶ್ವವೇದಿಕೆಗೆ ಕೊಂಡೊಯ್ಯುವಲ್ಲಿ ಪಿ.ಸಿ.ಸರ್ಕಾರ್ (ಹಿರಿಯ) ಕಾರಣವಾಗಿದ್ದರೆ, ಅವರ ಮಕ್ಕಳು ವಿಶ್ವ ವೇದಿಕೆಯಲ್ಲಿ ಇಂದ್ರಜಾಲಕ್ಕೆ ಮಹತ್ವದ ಹೆಸರು ತಂದುಕೊಡುವಲ್ಲಿ ಮಹತ್ವದ ಹೆಜ್ಜೆಗಳೊಂದಿಗೆ ಮುಂದುವರಿದಿದ್ದಾರೆ. ಸರ್ಕಾರ್ ಕುಟುಂಬದವರು ಭಾರತೀಯ ಮ್ಯಾಜಿಕ್ ಲೋಕದ ಉತ್ತಮ ರಾಯಭಾರಿಗಳಾಗಿ ಹೊರಹೊಮ್ಮಿದ್ದಾರೆ.

ಕೊಳ್ಳೆ ಹೊಡೆದ ಗರಿಷ್ಠ ಹಣ ಮೂರು ಕ್ಷೇತ್ರದಲ್ಲಿ ಬಳಸುವ ಆತಂಕ

ಚುನಾವಣೆ:ಹಣ ಬಳಕೆ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಕಾಂಗ್ರೆಸ್ ಮುಖಂಡರು ಕೊಳ್ಳೆ ಹೊಡೆದ ಗರಿಷ್ಠ ಹಣವನ್ನು ಉಪಚುನಾವಣೆಯಲ್ಲಿ ಬಳಸುವ ಪ್ರಯತ್ನದಲ್ಲಿರುವುದು ಗಮನಕ್ಕೆ ಬಂದಿದ್ದು, ಚುನಾವಣಾ ಆಯೋಗ ಈ ವಿಷಯ ಗಂಭೀರವಾಗಿ ಪರಿಗಣಿಸಬೇಕಿದೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಆಗ್ರಹಿಸಿದರು.

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೂರು ಉಪ ಚುನಾವಣೆಗಳು ನ್ಯಾಯಸಮ್ಮತ ಚುನಾವಣೆ ಆಗಲು ಸಾಧ್ಯವಿಲ್ಲ. ಕಾಂಗ್ರೆಸ್‌ನ ಚುನಾವಣಾ ಉಸ್ತುವಾರಿಗಳ ಮೇಲೆ ಗಂಭೀರವಾದ ನಿಗಾ ವಹಿಸಬೇಕು. ಈ ಸಂಬಂಧ ಆಯೋಗಕ್ಕೆ ಬೇಕಾದ ಮಾಹಿತಿ ನೀಡಲು ನಾವು ಸಿದ್ಧರಿದ್ದೇವೆ ಎಂದರು.

ಹಣದ ಪ್ರಭಾವದಿಂದ ಕಾಂಗ್ರೆಸ್ ಜನಸಾಮಾನ್ಯರ ತಲೆ ಹಾಳು ಮಾಡಿ ಹಣದ ಪ್ರಭಾವದ ಚುನಾವಣೆಯಾಗಿ ಪರಿವರ್ತಿಸಲಿದ್ದಾರೆ. ಇದಕ್ಕೆ ಬಿಜೆಪಿ ಹೆದರುವುದಿಲ್ಲ. ನಮ್ಮ ಕಾರ್ಯಕರ್ತರು, ಎನ್‌ಡಿಎ ಪ್ರಾಮಾಣಿಕ ಕಾರ್ಯಾಚರಣೆ ಮುಂದುವರಿಯಲಿದೆ. ಉಸ್ತುವಾರಿಗಳ ಭೂಗತ ಚಟುವಟಿಕೆಯನ್ನು ಆಯೋಗ ನಿಯಂತ್ರಿಸದೆ ಇದ್ದಲ್ಲಿ, ಸಾಮಾನ್ಯ ಜನರ ಮೇಲೆ ಗಂಭೀರ ಪ್ರಭಾವ ಬೀರಬಹುದು.

ಡಿ.ವಿ.ಸದಾನಂದಗೌಡ, ಮಾಜಿ ಸಿಎಂ

ಸಂಡೂರಿನಲ್ಲಿ ಇತ್ತೀಚಿಗೆ ಜೈಲಿನಿಂದ ಹೊರಗೆ ಬಂದ ನಾಗೇಂದ್ರರ ಉಸ್ತುವಾರಿ ಇದೆ.

ರಾಜ್ಯದಲ್ಲಿ ರೈತರ ಭೂಮಿ ಕೊಳ್ಳೆ ಹೊಡೆಯಲು, ವಕ್ಫ್ ಖಾತೆ ಬದಲಿಸಿ ಆಸ್ತಿ ನುಂಗಿ ನೀರು ಕುಡಿಯಲು ಹೊರಟ ಜಮೀರ್ ಶಿಗ್ಗಾವಿ ಉಸ್ತುವಾರಿ ಆಗಿದ್ದಾರೆ. ಚನ್ನಪಟ್ಟಣದಲ್ಲಿ ಡಿ.ಕೆ.ಶಿವಕುಮಾರರ ಚುನಾವಣಾ ಉಸ್ತುವಾರಿ ಇದೆ. ಕಾಂಗ್ರೆಸ್‌ಗೆ ಇದೊಂದು ಸವಾಲಿನ ಚುನಾವಣೆ ಎನಿಸಿದೆ. ರಾಜ್ಯ ಬೊಕ್ಕಸ ಲೂಟಿಯಲ್ಲಿ ನಿಸ್ಸೀಮರಾದ ಮೂವರು ಕಾಂಗ್ರೆಸ್ಸಿಗರು ಉಪ ಚುನಾವಣೆ ಉಸ್ತುವಾರಿ ತೆಗೆದುಕೊಂಡಿದ್ದಾರೆ ಎಂದು ಆರೋಪಿಸಿದರು.

ಪಾಲಿಕೆಯಿಂದ ಕಲ್ಯಾಣ ಕಾರ್ಯಕ್ರಮಗಳಿಗೆ ಅರ್ಜಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ ಒಂದು ವಾರದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲು ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಾಲಿಕೆಯ ಕಲ್ಯಾಣ ವಿಭಾಗದಲ್ಲಿ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ನಡೆದ ಸಭೆ ಉದ್ದೇಶಿಸಿ ಮಾತನಾಡಿ, ಕಲ್ಯಾಣ ವಿಭಾಗದಡಿ ವಿವಿಧ ಯೋಜನೆಗಳಿಗೆ ವಾರದೊಳಗಾಗಿ ಅರ್ಜಿ ಆಹ್ವಾನಿಸಬೇಕು. ಈ ಬಗ್ಗೆ ನಾಗರೀಕರಲ್ಲಿ ಅರಿವು ಮೂಡಿಸಲು ಸೂಚನೆ ನೀಡಿದರು.

ಉಪ ಮುಖ್ಯಮಂತ್ರಿಗಳ ನಿರ್ದೇಶನದಂತೆ ಪಾಲಿಕೆ ವ್ಯಾಪ್ತಿಯಲ್ಲಿ ವ್ಯಾಪಾರ ಮಾಡುತ್ತಿರುವ ಬೀದಿ ಬದಿ ವ್ಯಾಪಾರಿಗಳಿಗೆ ಇ-ವೆಂಡಿಂಗ್ ವಾಹನ ನೀಡಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಆ ಬಗ್ಗೆ ಚರ್ಚೆ ಮಾಡಿ ಅಭಿಪ್ರಾಯ ಪಡೆದ ಬಳಿಕ, ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗುವುದು. ಅನಂತರ ಆಯ್ಕೆ ಮಾಡಿ ವಿವಿಧ ಬಗೆಯ ಇ-ವೆಂಡಿಂಗ್ ವಾಹನಗಳನ್ನು ವ್ಯಾಪಾರಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಸಿದ್ಧಪಡಿಸಿ ವ್ಯಾಪಾರಿಗಳ ವಯಕ್ತಿಕ ಬಂಡವಾಳ ಹಾಗೂ ಬಿಬಿಎಂಪಿ ಅನುದಾನ ಸೇರಿ ಇ-ವೆಂಡಿಂಗ್ ವಾಹನಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುವುದು ಎಂದು ತಿಳಿಸಿದರು.

ಮಾರಾಟಗಾರರಿಗೆ ಇ-ವೆಂಡಿಂಗ್ ವಾಹನ

ತರಕಾರಿ ಮಾರಾಟಗಾರರು, ಹಣ್ಣು ಮಾರಾಟಗಾರರು, ಪ್ಲಾಸ್ಟಿಕ್ ವಸ್ತುಗಳ ಮಾರಾಟಗಾರರು, ಮಣ್ಣಿನ ಮಡಕೆಗಳು ಮಾರಾಟಗಾರರು, ಬಳೆ ಮಾರಾಟಗಾರರು, ಹೂ ಮಾರಾಟಗಾರರು, ಟಾಯ್ಸ್ ಮಾರಾಟಗಾರರು, ಪಾದರಕ್ಷೆ ಮಾರಾಟಗಾರರು, ಕಾಸ್ಮೆಟಿಕ್ಸ್, ಸ್ತ್ರೀ ಪರಿಕರಗಳ ಮಾರಾಟಗಾರರು, ಗಾಗಲ್ಸ್ ಮಾರಾಟಗಾರರು, ಸೆಕೆಂಡ್ ಹ್ಯಾಂಡ್ ಬುಕ್ಸ್ ಮಾರಾಟಗಾರರು, ಪೇಂಟರ್ಸ್, ಪೇಂಟಿಂಗ್ಸ್ ಮಾರಾಟಗಾರರು, ಪ್ರಾಚೀನ ವಸ್ತುಗಳ ಮಾರಾಟಗಾರರು, ಬೆಲ್ಟ್ ಮಾರಾಟಗಾರರು, ವಾಚ್ ಮಾರಾಟಗಾರರು, ಫೋನ್ ಪರಿಕರಗಳ ಮಾರಾಟಗಾರರು, ಮಸಾಲೆ ಪದಾರ್ಥಗಳ ಮಾರಾಟಗಾರರು, ಚಾಯ್ ವಾಲಾ, ಪಾನಿ ಪುರಿ ಸ್ಟಾಲ್‌ಗಳು, ವಡಾಪಾವ್/ ಸ್ಯಾಂಡ್ವಿಚ್/ಪಿಜ್ಜಾ, ಚೈನೀಸ್ ಫುಡ್, ಸೋಡಾ, ಮ್ಯಾಗಿ ಸೇರಿದಂತೆ ಇನ್ನಿತರೆ ಮಾರಾಟಗಾರರಿಗೆ ಇ-ವೆಂಡಿಂಗ್ ವಾಹನ ನೀಡಲಾಗುವುದು.

ಸಹಾಯಕ ಆಯುಕ್ತ ನಾಗಭೂಷಣ್, ಕರ್ನಾಟಕ ಬೀದಿ ಬದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ರಂಗಸ್ವಾಮಿ, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ವಲಯ ಮಟ್ಟದ ಅಧಿಕಾರಿಗಳು, ವಿ.ಸಿ ಸದಸ್ಯರು ಹಾಗೂ ಬೀದಿ ಬದಿ ವ್ಯಾಪಾರಿಗಳು ಇದ್ದರು.

ಪಾಲಿಕೆಯ ಕಲ್ಯಾಣ ವಿಭಾಗದಲ್ಲಿ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ನಡೆದ ಸಭೆ ಉದ್ದೇಶಿಸಿ ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಮಾತನಾಡಿದರು.

ವ್ಯಾಪಾರಿಗಳ ಸಮೀಕ್ಷೆ

ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ಅಧಿನಿಯಮ, 2014 ಮತ್ತು ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ(ಜೀವನೋಪಾಯ ಸಂರಕ್ಷಣೆ, ಬೀದಿ ಬದಿ ವ್ಯಾಪಾರದ ನಿಯಂತ್ರಣ ಮತ್ತು ಪರವಾನಗಿ) ಯೋಜನೆ, 2020 ರಂತೆ ಪಾಲಿಕೆಯಲ್ಲಿ ನಗರ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯನ್ನು ನಡೆಸಲಾಗುತ್ತಿದ್ದು, ವಲಯವಾರು ಸಮೀಕ್ಷಾ ಕಾರ್ಯವನ್ನು 600ಕ್ಕೂ ಹೆಚ್ಚು ಗಣತಿದಾರರ ಮೂಲಕ ಸಮೀಕ್ಷೆ ಮಾಡಲಾಗುತ್ತಿದ್ದು, ಈಗಾಗಲೇ 12495 ಕ್ಕೂ ಹೆಚ್ಚು ಬೀದಿ ಬದಿ ವ್ಯಾಪಾರಿಗಳನ್ನು ಎಲ್ಲಾ ವಲಯಗಳಲ್ಲಿ ಸಮೀಕ್ಷೆಯ ಮೂಲಕ ಗುರುತಿಸಲಾಗಿದೆ.

ಅಮೆರಿಕಗೆ ತೆರಳಿ ಚಿಕಿತ್ಸೆ ಪಡೆಯಲು ನಿರ್ಧಾರ | ಒಟ್ಟು ನಾಲ್ಕು ಹಂತದಲ್ಲಿ ಚಿಕಿತ್ಸೆ

ಶಿವರಾಜಕುಮಾರ್‌ಗೆ ಆರೋಗ್ಯ ಸಮಸ್ಯೆ

ಬೆಂಗಳೂರು: ಸೆಂಚೂರಿ ಸ್ಟಾರ್ ಶಿವರಾಜ್‌ಕುಮಾರ್ ಅವರು ಶೀಘ್ರದಲ್ಲಿಯೇ ಚಿಕಿತ್ಸೆಗೆಂದು ಅಮೆರಿಕಕ್ಕೆ ತೆರಳಲಿದ್ದಾರೆ.

ಶಿವಕುಮಾರ್ ಅವರಿಗೆ ಅನಾರೋಗ್ಯ ಕಾಡುತ್ತಿದ್ದು, ಈ ಹಿನ್ನೆಲೆಯಲ್ಲಿ ಚಿಕಿತ್ಸೆಗೆಂದು ಅಮೆರಿಕಕ್ಕೆ ತೆರಳುತ್ತಿರುವುದಾಗಿ ಅವರೇ ಹೇಳಿಕೊಂಡಿದ್ದಾರೆ.

ಈ ಬಗ್ಗೆ ಮಾತನಾಡಿರುವ ಶಿವರಾಜ್‌ಕುಮಾರ್, ನನಗೆ ಸ್ವಲ್ಪ ಆರೋಗ್ಯ ಸಮಸ್ಯೆ ಕಾಡುತ್ತಿದೆ. ಅದಕ್ಕೆ ಚಿಕಿತ್ಸೆಯ ಅಗತ್ಯವಿದೆ. ಒಟ್ಟು ನಾಲ್ಕು ಹಂತದಲ್ಲಿ ಚಿಕಿತ್ಸೆ ನಡೆಯುತ್ತದೆ. ಅಮೆರಿಕದಲ್ಲಿ ಚಿಕಿತ್ಸೆ ಪಡೆಯುವುದೇ ಅಥವಾ ಭಾರತದಲ್ಲಿಯೇ ಚಿಕಿತ್ಸೆ ಪಡೆಯುವುದೇ ಎಂದು ಯೋಚಿಸಿದೆ. ಈಗ ಅಮೆರಿಕಗೆ ತೆರಳಿ ಚಿಕಿತ್ಸೆ ಪಡೆಯಲು ನಿರ್ಧರಿಸಿದ್ದೇನೆ. ಒಂದು ತಿಂಗಳ ಕಾಲ ಚಿಕಿತ್ಸೆಗೆ ಸಮಯ ಹಿಡಿಸಬಹುದು. ಇದನ್ನು ಕೇಳಿ ಅಭಿಮಾನಿಗಳು ಗಾಬರಿಯಾ ಗಿದ್ದಾರೆ. ನನಗೂ ಮೊದಲು ಗಾಬರಿಯಾಗಿತ್ತು. ಅಭಿಮಾನಿಗಳೇ ನನಗೆ ಧೈರ್ಯ ತುಂಬಿದ್ದಾರೆ. ಜನರ ಪ್ರೀತಿ ನನ್ನ ಮೇಲಿದೆ, ಚಿಕಿತ್ಸೆ ಪಡೆದರೆ ಎಲ್ಲವೂ ಸರಿಯಾಗುತ್ತದೆ ಎಂದು ಶಿವರಾಜ್ ಕುಮಾರ್ ಹೇಳಿದ್ದಾರೆ. ಸದ್ಯ ಭೈರತಿ ರಣಗಲ್ ಚಿತ್ರದ ಬಿಡುಗಡೆಯ ಪ್ರಚಾರದಲ್ಲಿರುವ ಶಿವರಾಜ್ ಕುಮಾರ್ ಈ ತಿಂಗಳಾಂತ್ಯದಲ್ಲಿ ಅಥವಾ ಡಿಸೆಂಬರ್ ಮೊದಲ ವಾರದಲ್ಲಿ ತಮ್ಮ ಕುಟುಂಬದವರೊಂದಿಗೆ ಅಮೆರಿಕಾಗೆ ತೆರಳಿ ಚಿಕಿತ್ಸೆ ಪಡೆಯಲಿದ್ದಾರೆ.

Building Home. Strengthening India.

Aadhar Housing Finance Ltd
GHAR BANEGA, TOH DESH BANEGA.

AUM - ₹ 22,817 Cr.
DISBURSEMENT (H1 FY 25) - ₹ 3,532 Cr.
NET PROFIT AFTER TAX (H1 FY 25) - ₹ 428 Cr.
LIVE ACCOUNTS - 277,000+
PRESENCE ACROSS - 556 Branches & Offices 21 States & UTs

Toll Free - 1800 3004 2020 | www.aadharhousing.com

STATEMENT OF CONSOLIDATED FINANCIAL RESULTS FOR THE QUARTER AND HALF YEAR ENDED SEPTEMBER 30, 2024

(Rs. in lakhs)

Sr. No.	PARTICULARS	For the quarter ended September 30, 2024	For the quarter ended September 30, 2023	For the half year ended September 30, 2024	For the year ended March 31, 2024
		Unaudited	Unaudited	Unaudited	Audited
1	Total Revenue from Operations	76,427	62,855	1,47,741	2,58,681
2	Net Profit / (Loss) for the period (before Tax, Exceptional and/or Extraordinary items)	29,243	25,302	54,967	95,959
3	Net Profit / (Loss) for the period before tax (after Exceptional and/or Extraordinary items)	29,243	25,302	54,967	95,959
4	Net Profit / (Loss) for the period after tax (after Exceptional and/or Extraordinary items)	22,751	19,730	42,765	74,964
5	Total Comprehensive Income for the period [Comprising Profit/ (Loss) for the period (after tax) and Other Comprehensive Income (after tax)]	22,751	19,820	42,765	75,006
6	Paid up Equity Share Capital	42,984	39,476	42,984	39,476
7	Reserves (excluding Revaluation Reserve)	5,44,239	3,64,819	5,44,239	4,05,499
8	Securities Premium Account	2,29,557	1,33,700	2,29,557	1,33,700
9	Net worth	5,87,217	4,04,289	5,87,217	4,44,969
10	Paid up Debt Capital/ Outstanding Debt	14,60,930	12,75,153	14,60,930	13,95,962
11	Outstanding Redeemable Preference Shares	NA	NA	NA	NA
12	Debt Equity Ratio	2.49	3.15	2.49	3.14
13	Earnings Per Share (not annualised for quarter and half year ended periods)				
	1. Basic:	5.31	5.00	10.18	18.99
	2. Diluted:	5.16	4.85	9.87	18.35
14	Capital Redemption Reserve	NA	NA	NA	NA
15	Debenture Redemption Reserve	16,910	16,910	16,910	16,910
16	Debt Service Coverage Ratio	1.52	0.70	1.37	0.89
17	Interest Service Coverage Ratio	2.03	2.06	1.98	1.97
18	Total Debts to Total Assets (%)	70.05%	73.64%	70.05%	73.64%
19	Net profit Margin (%)	29.77%	31.38%	28.95%	28.98%
20	GNPA (%)	1.36%	1.38%	1.36%	1.10%
21	NNPA (%)	0.88%	0.85%	0.88%	0.65%
22	Provision Coverage Ratio (%)	35.34%	38.10%	35.34%	41.27%
23	Capital Adequacy Ratio (CRAR) (%)	46.62%	42.25%	46.62%	38.46%

Notes:

a) The above is an extract of the detailed format of quarterly results filed with the Stock Exchanges under Regulation 33 and 52 of the Listing Regulations. The full format of the quarterly financial results are available on the websites of the Stock Exchanges www.bseindia.com and www.nseindia.com and the Aadhar Housing Finance Limited www.aadharhousing.com

b) For the other line items referred in regulation 52 (4) of the Listing Regulations, pertinent disclosures have been made to the Stock Exchange BSE Limited and can be accessed on www.bseindia.com

c) Current ratio, Long term debt to working capital ratio, Bad debts to account receivable ratio, Current liability ratio, Debtors turnover, Inventory turnover and Operating margin (%) are not applicable.

d) Key standalone financial information:

Sr. No.	PARTICULARS	For the quarter ended September 30, 2024	For the quarter ended September 30, 2023	For the half year ended September 30, 2024	For the year ended March 31, 2024
1	Total Revenue from Operations	75,082	61,400	1,44,760	2,52,353
2	Profit before tax & exceptional items	29,252	25,300	54,974	95,923
3	Profit before tax	29,252	25,300	54,974	95,923
4	Profit after tax	22,756	19,728	42,764	74,851

e) Previous period / year figures have been regrouped / re-classified wherever necessary in line with the financial results for the quarter and half year ended September 30, 2024.

For and on behalf of the Board of Directors of Aadhar Housing Finance Limited

Sd/-
Rishi Anand
Managing Director & CEO
DIN 02303503

Place : Mumbai
Date : November 06, 2024

Aadhar Housing Finance Ltd., CIN: L66010KA1990PLC011409, **Registered Office:** No. 3, JVT Towers, 8th 'A' Main Road, Sampangiramanagar, Near Hudson Circle, Bengaluru- 560 027 | **Corporate Office:** Unit No. 802, Natraj Rustomjee, Western Express Highway and M.V.Road, Andheri (East), Mumbai – 400069 | Tel. No.: 022 4168 9900 | Fax: 022 4168 9934 | **Customer Care Toll Free:** 1800 3004 2020 | **E-mail:** customercare@aadharhousing.com | **Website:** www.aadharhousing.com

ಯೋಗ ಶಿಕ್ಷಕಿಯನ್ನು ಜೀವಂತವಾಗಿ ಗುಂಡಿಯಲ್ಲಿ ಹೂತುಹಾಕಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಶಿಕ್ಷಕಿಯನ್ನು ಜೀವಂತವಾಗಿ ಹೂತಿದ್ದ ದುಷ್ಕರ್ಮಿಗಳ ಸೆರೆ

ಚಿಕ್ಕಬಳ್ಳಾಪುರ: ಬೆಂಗಳೂರಿನ ಯೋಗ ಶಿಕ್ಷಕಿಯೊಬ್ಬರನ್ನು ಅಪಹರಿಸಿ ಅರೆಬೆತ್ತಲೆಗೊಳಿಸಿ ಜೀವಂತವಾಗಿ ಗುಂಡಿಯಲ್ಲಿ ಹೂತುಹಾಕಿದ್ದ ಐವರು ಆರೋಪಿಗಳನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ದಿಬ್ಬೂರಹಳ್ಳಿಯ ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ಖಾಸಗಿ ಡಿಟೆಕ್ಟಿವ್ ಏಜೆನ್ಸಿ ಮಾಲೀಕ ಸತೀಶ್ ರೆಡ್ಡಿ, ರಮಣ, ಸಲ್ಮಾನ್ ಮತ್ತು ರವಿ ಎಂದು ಗುರುತಿಸಲಾಗಿದೆ. ಆರೋಪಿ ಸತೀಶ್ ರೆಡ್ಡಿ ಶಿಕ್ಷಕಿಯ ಬಳಿ ಯೋಗ ಕಲಿಯಲು ಹೊಗುತ್ತಿದ್ದ. ನಂತರ ಗನ್ ತರಬೇತಿ ಕೊಡುವುದಾಗಿ ಆಕೆಯ ಮನೆಗೆ ಬಂದಿದ್ದ. ಈ ವೇಳೆ ಆರೋಪಿಗಳ ಗ್ಯಾಂಗ್ ಶಿಕ್ಷಕಿಯನ್ನು ಅಪಹರಿಸಿತ್ತು. ಬೆಂಗಳೂರಿನ ಕೆ.ಆರ್.ಪುರಂ ನಿವಾಸಿಯಾದ ಶಿಕ್ಷಕಿಯನ್ನು ಅ.23ರಂದು ಆರೋಪಿಗಳ ಗ್ಯಾಂಗ್ ಅಪಹರಿಸಿತ್ತು. ಬಳಿಕ ಶಿಡ್ಲಘಟ್ಟ ತಾಲೂಕಿನ ಧನಮಿಟ್ಟೇನ ಹಳ್ಳಿ ಬಳಿ ಜೀವಂತವಾಗಿ ಹೂತುಹಾಕಿ ಪರಾರಿಯಾಗಿದ್ದರು. ಸತ್ತಂತೆ ನಟಿಸಿದ್ದ ಶಿಕ್ಷಕಿ ಬಳಿಕ ಪಾರಾಗಿ ಬಂದು ಪೊಲೀಸರಿಗೆ ದೂರು ನೀಡಿದ್ದರು. ಶಿಕ್ಷಕಿಯ ಕೊಲೆಗೆ ಆಕೆಯ ಪ್ರಿಯಕರನ ಪತ್ನಿ ಸುಪಾರಿ ನೀಡಿದ ಆರೋಪ ಕೇಳಿಬಂದಿದೆ.

ವಕ್ಫ್ ಬೇಲಿ: ಜೆಪಿಸಿಗೆ ದೂರುಗಳ ಸುರಿಮಳೆ

ಮೊದಲಪುಟದಿಂದ

ಕಮಲ ನಾಯಕರಲ್ಲೇ ಅಸಹಕಾರ: ವಕ್ಫ್ ವಿಚಾರ ಸಂಬಂಧ ಬಿಜೆಪಿಯು ರಾಜ್ಯವ್ಯಾಪಿ ಹೋರಾಟ ಕೈಗೆತ್ತಿಕೊಂಡಿತ್ತು. ಮೊದಲು ವಿಜಯಪುರ, ಹುಬ್ಬಳ್ಳಿ, ಬೀದರ್, ಕಲಬುರಗಿ, ಶಿವಮೊಗ್ಗ, ಚಿತ್ರದುರ್ಗ ಸೇರಿದಂತೆ ರಾಜ್ಯದ ಹಲವೆಡೆ ವಕ್ಫ್ ಮಂಡಳಿ ನೋಟಿಸ್ ಸಂಬಂಧ ಪ್ರತಿಭಟನೆಗಳಾಗಿದ್ದವು. ರಾಜಧಾನಿಯಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷರು, ಪ್ರತಿಪಕ್ಷದ ನಾಯಕರು ಸೇರಿದಂತೆ ಪ್ರಮುಖರು ಹೋರಾಟ ನಡೆಸಿದ್ದರು. ಆದರೆ, ಈ ವಿಚಾರ ಗಂಭೀರವಾಗಿ ಪರಿಗಣಿಸಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಸಚಿವ ಜಮೀರ್ ಅವರಿಗೆ ಸೆಡ್ಡು ಹೊಡೆದು ವಿಜಯಪುರದಲ್ಲಿ ಅಮರಣಾಂತ ಸತ್ಯಾಗ್ರಹ ನಡೆಸಿದ್ದರು. ಇದಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಾಥ್ ಕೂಡ ನೀಡಿದ್ದರು. ಹೀಗಿದ್ದರೂ ಬಿಜೆಪಿಯ ಪ್ರಮುಖ ನಾಯಕರು ಇತ್ತ ಕಡೆ ತಲೆ ಹಾಕಿಲ್ಲ. ಈ ಹೋರಾಟ ಎರಡು ಭಾಗವಾಗಿ ಮಾಡುವಂತಾಯಿತು ಎಂದು ಕಾರ್ಯಕರ್ತರು ಕೊರಗಿಕೊಂಡರು.

